Admissibility of Adjournment Motion.

re: Death of Sri Krishna at Bhadrvathi

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ; ಭದ್ರಾವತಿಯಲ್ಲಿ ನಡೆದಂತಹ ಒಂದು ಕೊಲೆ ವಿಚಾರದ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಇಬ್ರಾಹಿಂರವರು ರಾಜೀನಾಮೆ ಕೊಡಬೇಕು ಒಂದು ವೇಳೆ ಅವರಾಗಿಯೇ ರಾಜೀನಾಮೆ ಕೊಡದೇ ಹೋದರೆ ನೀವಾಗಿ ರಾಜೀನಾಮೆಯನ್ನು ತರಿಸಿಕೊಳ್ಳಬೇಕು, ಇಲ್ಲದೆ ಹೋದರೆ ಅದು ಒಳ್ಳೆಯ ಸಂಪ್ರದಾಯವಾಗುವುದಿಲ್ಲ, ನ್ಯಾಯ ದೊರಕುವುದಿಲ್ಲವೆಂದು ಹೇಳುವುದರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ಅನೇಕ ಸದಸ್ಯರುಗಳು ಮಾಡಿದ್ದಾರೆ. ನಿನ್ನೆ ಅವರ ವಾದದ ದಾಟಿಯನ್ನು ನೋಡಿ ನಾವು ಏನೂ ಮಾತನಾಡಲಿಲ್ಲ ಸುಮಾರು ೨ ಗಂಟೆಯಿಂದ ೬ ಗಂಟೆಯವರೆಗೆ ಬಹಳ ಮಂದಿ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ.

೨-೩೦ ಪಿ. ಎಂ.

ಅವರು ಅನೇಕ ಸಂಪ್ರದಾಯಗಳ ಬಗ್ಗೆ ಹೇಳಿದ್ದಾರೆ ಪೋಲೀಸರ ಬಗ್ಗೆ ಹೇಳುತ್ತಾ ರೆಗ್ಯುಲರ್ ಪೋಲೀಸರು ಸರಿಯಾದ ಕ್ರಮ ಕೈಗೊಳ್ಳಲಿಲ್ಲ, ಅವರು ಹಸ್ತಕ್ಷೇಪಕ್ಕೆ ಒಳಗಾದಂಥ ರೀತಿಯಲ್ಲಿ ಕಂಡು ಬರುತ್ತದೆ ಇದೇ ರೀತಿ ಬೇಕಾದಷ್ಟು ವಿಷಯಗಳು ಪತ್ರಿಕೆಗಳ ಮೂಲಕ ಗೊತ್ತಾಗಿದೆ ಎಂದು ಸನ್ಮಾನ್ಯ ಹಿರಿಯ ಸದಸ್ಯರಾದ ದೇವೇಗೌಡರು, ಬೊಮ್ಮಾಯಿಯವರು ಮುಂತಾದ ಅನೇಕ ಸದಸ್ಯರು ಹೇಳಿದ್ದಾರೆ. ಶ್ರೀಮಾನ್ ಆರ್ಮುಗಂ ಅವರು he said yesterday that even if god were to come and tell him that he is a Harijan, he would refuse to be called as Harijan or Scheduled Caste. ಹೀಗೆಲ್ಲಾ ಏನೇನೋ ಮಾತುಗಳನ್ನು ಹೇಳಿದ್ದಾರೆ. ಕೊಲೆ ವಿಚಾರದಲ್ಲಿ ಚರ್ಚೆ ಮಾಡುವುದಿಲ್ಲ, ಈಗಾಗಲೇ ಅದು ಸೆಷನ್ಸ್ ಕೋರ್ಟಿಗೆ ಹೋಗಿರುವುದರಿಂದ ಆ ಬಗ್ಗೆ ಮಾತನಾಡಿದರೆ ಸಬ್ ಜ್ಯುಡೀಸ್ ಆಗುತ್ತದೆ, ಆ ದೃಷ್ಟಿಯಿಂದ ಅದರ ಬಗ್ಗೆ ಮಾತನಾಡುವುದಿಲ್ಲ ಎಂದು ಮಾನ್ಯ ಸದಸ್ಯರುಗಳು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಕೊಲೆಗೆ ಸಂಬಂಧಪಟ್ಟ ಅಪರಾಧಿಯಾಗಿರುವಂಥವರು ಮಂತ್ರಿಮಂಡಲದ ಸದಸ್ಯರಾದ ಶ್ರೀಮಾನ್ ಇಬ್ರಾಹಿಂ ಅವರ ತಮ್ಮಂದಿರಾಗಿರುವ ದೆಸೆಯಿಂದ ಈ ವಿಚಾರಣೆಯಾಗುವವರೆಗೆ ಅವರು ರಾಜೀನಾಮೆಯನ್ನು ಕೊಡಬೇಕು, ಇವರು ಹಸ್ತಕ್ಷೇಪ ಮಾಡಿರುವ ಬಗ್ಗೆ ಸಂಶಯದ ವಾತಾವರಣ ಇದೆ ಎಂದು ಹೇಳಿದರು. ಮಾನ್ಯ ದೇವೇಗೌಡರು ಸುಮಾರು ಪತ್ರಿಕೆಗಳನ್ನು ತಂದು ಹೇಳಿದ್ದಾರೆ 'ವಾಣಿ' ಎಂಬ ಇನ್‌ಸ್ಪೆಕ್ಟರ್‌ರವರು 'ವಾಣಿ' ಎಂದು ಹೇಳುವಂಥ ಬಸ್ಸಿನಲ್ಲಿ ಅಪರಾಧಿಯನ್ನು ಕರೆದುಕೊಂಡು ಬಂದು ರಾತ್ರಿ ೧೧ ಗಂಟೆಯಲ್ಲಿ ಬಸ್‌ಸ್ಟ್ಯಾಂಡಿನಲ್ಲಿ ಬಿಟ್ಟು ಅವರನ್ನು ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಇದೇ ರೀತಿ ಜನರಲ್ಲಾಗಿ, ಸ್ವಾಭಾವಿಕವಾಗಿ ಸುಮಾರು ಮಾತುಗಳನ್ನು ಆಡಿದ್ದಾರೆ. ಬಹುಶಃ ಪೋಲೀಸ್ ಇಲಾಖೆ ಮೇಲಿನ ಚರ್ಚೆ ಬಂದಾಗ ಅಥವಾ ಸಾಮಾನ್ಯಾಡಳಿತ ಇಲಾಖೆ ಮೇಲಿನ ಚರ್ಚೆ ಬಂದಾಗ ಇದರ ಬಗ್ಗೆ ಚರ್ಚೆಮಾಡಲು ಸಾಕಷ್ಟು ಅವಕಾಶವಿತ್ತು. ಆದರೂ ಈಗಲೇ ಮಾಡಿದ್ದಾರೆ ಮಾನ್ಯ ದೇವೇಗೌಡರು ಮಾಡಿದ್ದಾರೆ ಎಂದು ಹೇಳುವುದಿಲ್ಲ, ಕೆಲವು ಸದಸ್ಯರು ಮಾಡಿದ್ದಾರೆ. ಕೆಲವು ಸದಸ್ಯರು ಇಡೀ ಪೋಲೀಸ್ ಇಲಾಖೆ ರಾಜ್ಯದಲ್ಲಿ ಅಶಿಸ್ತಿನಿಂದ ವರ್ತನೆ ಮಾಡುತ್ತಿದೆ ಎಂಬ ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರು ಸರ್ಪ ಯಜ್ಞಕ್ಕೆ ಹೋಲಿಸಿ ಮಾತನಾಡಿದ್ದಾರೆ. ಸರ್ಪ ಯಜ್ಞ ಮಾಡಿದಾಗ ಸರ್ಪಗಳೆಲ್ಲಾ ಬಂದು ಬಿದ್ದರು ಒಂದು ಸರ್ಪ ಮಾತ್ರ ಇಂದ್ರನ ಸಿಂಹಾಸನಕ್ಕೆ ಸುತ್ತಿಕೊಂಡಿತ್ತು ಎಂದು.

ಶ್ರೀ ಕೆ. ಹೆಚ್. ಶ್ರೀನಿವಾಸ್ •— ಸಿಂಹಾಸನದ ಒಂದು ಕಾಲಿಗೆ.

ಶ್ರೀ ಆರ್. ಗುಂಡೂರಾವ್ .—ಮಾನ್ಯ ಶ್ರೀನಿವಾಸ್ ಅವರು ಎಷ್ಟು ಓದಿದ್ದಾರೋ ಅಷ್ಟು ಭಾರತವನ್ನು ಓದದಿದ್ದರೂ ಸ್ವಲ್ಪವಾದರೂ ನಾನು ಓದಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ .—ಓದದಿದ್ದರೂ ಕೇಳಿದ್ದೀರಿ.

ಶ್ರೀ ಆರ್. ಗುಂಡೂರಾವ್ .—ಓದಿದ್ದೇನೆ ಸ್ವಾಮಿ. ಪರೀಕ್ಷಿತ್ ರಾಜಾ ಏತಕ್ಕೆ ಯಜ್ಞ ಮಾಡಿದ ಎಂಬುದು ನಿಮಗೆ ಗೊತ್ತಿಲ್ಲ ಬಿಡಿ. ನೀವಂತು ರಾಮಾಯಣ, ಮಹಾಭಾರತ ಯಾವುದನ್ನೂ ನಂಬುವುದಿಲ್ಲ. ನಿಮಗಿರುವುದು ಒಂದೇ ಬಸವಲಿಂಗ ಪುರಾಣ. ನಾನೇನು ಮಾಡಲಿ ? ಹಿಂದೆ ಮುಂದೆ ಯಾವುದೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ .—ನೀವೇ ಓದಿರಿ ಸ್ವಾಮಿ ಎಲ್ಲಾ, ನಮಗೆ ಬೇಡ.

ಶ್ರೀ ಆರ್. ಗುಂಡೂರಾವ್.—ಅದನ್ನೇ ನಾನು ಹೇಳುತ್ತಿದ್ದೇನೆ. ನಿಮಗೆ ಬೇಡ ಎಂದರೆ ಬಿಟ್ಟು ಬಿಡಿ. ನಿಮ್ಮ ಕಡೆಯಲ್ಲೇ ಬೇರೆಯವರಿಗೆ ಬೇಕಾಗಿದೆ. ಅವರು ಹೇಳಿದ್ದಾರೆ.

ಶ್ರೀ ಹೆಚ್. ಗಂಗಾಧರನ್.—ಕೊಳ್ಳೇಗಾಲದಲ್ಲಿ ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಾ ಕುರಾನ್ ಓದುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಆರ್. ಗುಂಡೂರಾವ್. ಮಾನ್ಯ ಗಂಗಾಧರನ್ ಅವರು ರಾಮಾಯಣ, ಮಹಾಭಾರತ ಇದರಲ್ಲೆಲ್ಲಾ ನಂಬಿಕೆಯುಳ್ಳವರು, ವಿಶ್ವಾಸ ಇರುವವರು. ತಮಗೆ ವಿಶ್ವಾಸ ಇಲ್ಲ. ಆದ್ದರಿಂದ ನೀವು (ಶ್ರೀ ಬಿ. ಬಸವಲಿಂಗಪ್ಪನವರು) ಏತಕ್ಕೆ ಈ ಬಗ್ಗೆ ಮಾತನಾಡುತ್ತೀರಿ ? ನಿಮ್ಮ ಕಡೆಯವರೇ ಭಾಷಣ ಮಾಡುತ್ತಾ ಈ ಉದಾಹರಣೆಯನ್ನು ಕೊಟ್ಟರು ಯಾವುದೋ ಒಂದು ಮಾತನಾಡಿದ್ದಕ್ಕೆ ಮಾನ್ಯ ಬಸವಲಿಂಗಪ್ಪನವರು ಪಶ್ಚಾತ್ತಾಪ ಪಡಬೇಕಾಗಿತ್ತು ಎಂದು ನಿಮ್ಮವರೇ ಹೇಳಿದರು. ನಾನು ಹೇಳಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಬೂಸಾ,

ಶ್ರೀ ಆರ್. ಗುಂಡೂರಾವ್. ಬೂಸಾ ಬಗ್ಗೆ ನಾವು ಏತಕ್ಕೆ ಹೇಳೋಣ. ಅದು ಇದಕ್ಕೆ ಸಂಬಂಧವಿರಲಿಲ್ಲ. ಆದರೂ ಅವರು ಸ್ವಾಭಾವಿಕವಾಗಿ ಹೇಳಿದರು. ಆದರೆ ಪತ್ರಿಕೆಗಳಲ್ಲಿ ಮಾನ್ಯ ಬಸವಲಿಂಗಪ್ಪನವರು ಮಾತನಾಡಿದ್ದಾಗಲೀ, ಈ ವಿಷಯದ ಬಗ್ಗೆಯಾಗಲೀ, ಹೆಚ್ಚಿಗೆ ಬಂದಿಲ್ಲ. ಇದನ್ನೆಲ್ಲಾ ಸ್ವಲ್ಪ ಸ್ವಲ್ಪ ಹೇಳಿದ್ದಾರೆ. ಆದರೆ ಮಾನ್ಯ ಶ್ರೀನಿವಾಸ್ ಅವರು ಯಜ್ಞದ ಬಗ್ಗೆ ಏನು ಹೇಳಿದ್ದಾರೋ ಅದು ಪತ್ರಿಕೆಯಲ್ಲಿ ಬಾಕ್ಸ್ ಐಟಮ್‌ನಲ್ಲಿ ಬಂದಿದೆ. ಆದ್ದರಿಂದ ಮಾನ್ಯ ಬಸವಲಿಂಗಪ್ಪನವರಿಗೆ ಹೇಳುತ್ತಿದ್ದೇನೆ, ಯಾವುದು ಮುಖ್ಯ ಎಂಬುದನ್ನು ನೀವೇ ನೋಡಿ ಎಂದು. ಯಾವ ಪುರಾಣ ಮುಖ್ಯ ಎಂಬುದನ್ನು ಅವರು ತಿಳಿದುಕೊಳ್ಳಬಹುದು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಅದನ್ನು ತಿಳಿದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಶ್ರೀ ಆರ್. ಗುಂಡೂರಾವ್—ನೀವು ಎಲ್ಲಿಯವರೆಗೆ ಇಲ್ಲಿರುತ್ತೀರೋ ಅಲ್ಲಿಯವರೆಗೆ ಇದನ್ನು ತಿಳಿದು ಕೊಳ್ಳಲೇಬೇಕಲ್ಲ. ನೀವು ರಾಮಾಯಣ ಮಹಾಭಾರತದ ಬಗ್ಗೆ ತಿಳಿದುಕೊಳ್ಳದಿದ್ದರೂ ಅದರ ಬಗ್ಗೆ ನಂಬಿಕೆ ಇರುವವರ ಮಧ್ಯೆ ಕುಳಿತಿದ್ದೀರಿ. ತಮ್ಮ ನಾಯಕರು ಇಲ್ಲ ಎಂದು ಹೇಳುತ್ತಾರೆಯೋ ಕೇಳಿ. ನೀವು ಏತಕ್ಕೆ ಸುಮ್ಮನೆ ತಪ್ಪಿಸಿಕೊಳ್ಳುತ್ತೀರಿ.

ಶ್ರೀ ಬಿ. ಬಸವಲಿಂಗಪ್ಪ.—ನೀವು ನಂಬಿ ಸ್ವಾಮಿ.

ಶ್ರೀ ಆರ್. ಗುಂಡೂರಾವ್.—ನಾನು ನಂಬುತ್ತೇನೆ, ಇಲ್ಲ ಎಂದು ಹೇಳುವುದಿಲ್ಲ. ನನಗೆ ಆ ಬಗ್ಗೆ ನಂಬಿಕೆ ವಿಶ್ವಾಸ ಇದೆ. ನಾನು ಏತಕ್ಕೆ ನಿಮ್ಮಹಾಗೆ ಹೇಳಲ್ಲಿ ?

ಶ್ರೀ ಕೆ. ಬಿ. ಶಿವಯ್ಯ.—ಮಠಗಳಿಗೂ ಹೋಗುತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನೀವೂ ಮಠಗಳಿಗೆ ಹೋಗಿದ್ದೀರಿ ನಿಮಗೆ ಸಹಾಯ ಮಾಡುತ್ತೇವೆ ಎಂದಾಗ ಅವರನ್ನು ಹೋಗಿ ಹೊಗಳುವುದು, ಸಹಾಯ ಮಾಡದಿದ್ದಾಗ ತೆಗಳುವುದು ಮಾಡುವುದಿಲ್ಲ. ನಾವು ಯಾವಾಗಲೂ ಒಂದೇ ತರಹ ಇರುತ್ತೇವೆ, ಯಾವಾಗಲೂ ಹೋಗುತ್ತಿರುತ್ತೇವೆ. ಆ ವಿಷಯ ನೀವೇಕೆ ಮಾತನಾಡುತ್ತೀರಿ ? ತಾವೂ ಕೂಡ ಮಠದಲ್ಲೇ ಇದ್ದೀರಿ, ಅಲ್ಲೇ ಇದ್ದು ಮಂತ್ರಿಯಾಗಿದ್ದೀರಿ, ಅದು ದೇಶಕ್ಕೆಲ್ಲಾ ಗೊತ್ತಿದೆ, ತಮ್ಮ ಕ್ಷೇತ್ರದ ಜನರಿಗೂ ಗೊತ್ತಿದೆ. ಇಲ್ಲದಿದ್ದರೆ ನೀವು ಚುನಾವಣೆಯಲ್ಲಿ ಗೆಲ್ಲುವುದಕ್ಕೇ ಆಗುವುದಿಲ್ಲ. ಇದೆಲ್ಲಾ ಕಾಟಾಚಾರದ ಮಾತುಗಳನ್ನು ನೀವು ಆಡುವುದು ಬೇಡ. ಅದರಲ್ಲೂ ಇಲ್ಲಿ ಆಡುವುದು ಬೇಡ. ಬೇಕಾದರೆ ಆಮೇಲೆ ನಾವು ನೀವು ಹೊರಗಡೆ ಮಾತನಾಡೋಣ. ಸುಮ್ಮನೆ ಅವರ ಜೊತೆ ಹೋಗಿ ಅಲ್ಲಿ ಕುಳಿತುಕೊಂಡು ಏನೇನೋ ಮಾತನಾಡಿ ಮುಂದೆ ಏನಾದರೂ ಆಗುವುದನ್ನೂ ಏತಕ್ಕೆ ತಪ್ಪಿಸಿಕೊಳ್ಳುತ್ತೀರಿ ?

ಅಧ್ಯಕ್ಷರು.—ಮಧ್ಯೆ ಮಧ್ಯೆ ಈ ವಿಷಯಗಳನ್ನೆಲ್ಲಾ ಮಾತನಾಡುವುದು ಬೇಡ. ಮಾನ್ಯ ಸದಸ್ಯರುಗಳು ಮಧ್ಯೆ ಎದ್ದು ಮಾತನಾಡುವುದನ್ನು ದಯವಿಟ್ಟು ಕಡಿಮೆ ಮಾಡಿ.

ಶ್ರೀ ಆರ್. ಗುಂಡೂರಾವ್.—ಭದ್ರಾವತಿಯ ಪೋಲೀಸರಿಗೆ ಈ ವಿಷಯ ಗೊತ್ತಾಗಿದ್ದು ೧೫-೪-೧೯೮೦ರಲ್ಲಿ. In March 1980, there was no report or complaint, of any law and order problem having arisen.

೨೫-೩-೧೯೮೦ರಲ್ಲಿ ಶ್ರೀಮಾನ್ ಇಬ್ರಾಹಿಂ ಅವರು ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದರು ೨೬-೩-೧೯೮೦ರಲ್ಲಿ ಕೊಲೆ ಆಯಿತು ಎಂದು ಮಾನ್ಯ ಸದಸ್ಯರುಗಳು ಹೇಳಿದರು. ಆದರೆ ಮಾನ್ಯ ಇಬ್ರಾಹಿಂ ಅವರು ಪ್ರಮಾಣವಚನ ಸ್ವೀಕಾರ ಮಾಡಿದ್ದು ೨೫-೨-೧೯೮೦ರಲ್ಲಿ. ಮಾನ್ಯ ದೇವೇಗೌಡರೂ ಪ್ರಮಾಣವಚನ ಸ್ವೀಕಾರ ಮಾಡಿದ ೨೪ ಗಂಟೆಗಳಲ್ಲಿ ಈ ಘಟನೆ ನಡೆಯಿತು ಎಂದು ಹೇಳಿದರು, ಮಾನ್ಯ ಬಸವಲಿಂಗಪ್ಪನವರೂ ಹೇಳಿದರು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳಲಿಲ್ಲ.

ಶ್ರೀ ಆರ್. ಗುಂಡೂರಾವ್.—ಹೇಳಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳಿಲ್ಲ.

ಶ್ರೀ ಆರ್. ಗುಂಡೂರಾವ್.—ಹೇಳಿದ್ದರೆ ?

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ ಸ್ವಾಮಿ, ನಾನು ಹೇಳಿಲ್ಲ.

ಶ್ರೀ ಆರ್ ಗುಂಡೂರಾವ್.—ಈಗ ನೀವು ಹೇಳಿರುವುದು ತೋರಿಸಿದರೆ ? ಎಲ್ಲಾ ರೆಕಾರ್ಡ್‌ನಲ್ಲಿದೆ ನೀವು ಹೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧಿಕಾರಕ್ಕೆ ಬಂದ ಒಂದು ತಿಂಗಳ ಮೇಲೆ ಎಂದು ಅವರು ಹೇಳಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನೀವು ಲಾಯರ್ ಕೆಲಸ ಮಾಡಬೇಡಿ. ಮಾನ್ಯ ಬಸವಲಿಂಗಪ್ಪನವರು ಹೇಳಿದ್ದಾರೆ, ಮರೆತ್ತಿದ್ದಾರೆ ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ಹೋಗಲಿ ಬಿಡಿ.

ಶ್ರೀ ಆರ್. ಗುಂಡೂರಾವ್.—ನಿಮ್ಮ ಭಾಷೆಯಲ್ಲೇ ಹೇಳಿಬಿಡಿ. ಅವರ ಭಾಷೆ ಗೊತ್ತಿಲ್ಲ ಅಧ್ಯಕ್ಷರೆ ? ಏನಾದರೂ ಹೇಳಿದರೆ ನೆಗೆದುಬಿದ್ದುಹೋಗಲಿ ಬಿಡಿ ಎಂದು ಹೇಳುತ್ತಿದ್ದರು. ಅದನ್ನೇ ಇಲ್ಲೂ ಹೇಳಿಬಿಡಿ. ಹಾಗೆ ಹೇಳಿಬಿಟ್ಟರೆ ತೊಂದರೆಯೇ ಇಲ್ಲವಲ್ಲ. In March 1980 there was no report or complaint, of any law and order problem having arisen. ಆಗ ಭದ್ರಾವತಿ ಪೋಲೀಸ್ ಠಾಣೆಗೆ ಯಾವ ವರದಿಯಾಗಲೀ ದೂರುಗಳಾಗಲೀ ಬಂದಿರಲಿಲ್ಲ ಯಾವಾಗ ಬಂತು ಎಂದರೆ Sri K. Raju appeared before the Sub-Inspector of Old Town Police Station, Bhadravathi and gave a written complaint that his brother Krishna was missing since 26-3-1980. A complaint in Crime No. 88/80 of missing person was registered and investigation taken up. ಏಪ್ರಿಲ್ ೧೫ನೇ ತಾರೀಖು ಕಂಪ್ಲೇಂಟ್ ರಿಜಿಸ್ಟರ್ ಆಗಿದೆ. ಏಪ್ರಿಲ್ ೧೫ನೇ ತಾರೀಖಿನ ದಿವಸ ಭದ್ರಾವತಿ ಪೋಲಿಸ್ ಠಾಣೆಗೆ ರಾಜು ಎನ್ನುವವರಿಂದ ಒಂದು ದೂರು ಬಂತು. ಆ ದೂರು ಏನೆಂದರೆ, ನನ್ನ ಅಣ್ಣ ಕೃಷ್ಣ ಎನ್ನುವವನು ಕಾಣುತ್ತಿಲ್ಲ, ಕಾಣೆಯಾಗಿದ್ದಾನೆ ಎಂದು ದೂರು ಬಂದ ತಕ್ಷಣ ೧೫-೪-೧೯೮೦ನೇ ತಾರೀಖಿನ ದಿವಸ ಕ್ರೈಂ ನಂ. ೮೮ರ ಪ್ರಕಾರ ಪೋಲೀಸರು ಕೇಸನ್ನು ರಿಜಿಸ್ಟರು ಮಾಡಿಕೊಂಡರು. On 17-4-1980, Radio messages were flashed to all the Police Stations in the State by the P.S.I. about the disappearance of Krishna and his description. ೧೫ನೇ ತಾರೀಖು ದೂರು ಬಂದ ಮೇಲೆ ೧೭ನೇ ತಾರೀಖು ಕೃಷ್ಣನ ಕುರಿತು ಎಲ್ಲ ಕಡೆ ಸುದ್ದಿ ಕಳುಹಿಸಿದ್ದಾರೆ. ಈ ಎರಡು ದಿವಸ

ಗಳು ಏತಕ್ಕೆ ಆಯಿತೆಂದರೆ, ದೂರು ಬಂದ ತಕ್ಷಣ ಕಾಣೆಯಾಗಿರುವವನು ಯಾರು ಎಂದು ತಿಳಿದುಕೊಂಡು ಆತನ ಎತ್ತರ ಎಷ್ಟು ? ಬಣ್ಣವೇನು ? ಕಾಣೆಯಾದ ದಿನ ಆತ ಯಾವ ಬಣ್ಣದ ಬಟ್ಟೆ ಧರಿಸಿದ್ದ ? ಎನ್ನುವುದನ್ನೆಲ್ಲ ತಿಳಿದುಕೊಂಡು ಇಡೀ ರಾಜ್ಯದ ಎಲ್ಲ ಭಾಗಗಳಿಗೂ ವೈರ್‌ಲೆಸ್ ರೇಡಿಯೋ ಸುದ್ದಿಯನ್ನು ಕಳುಹಿಸಿಕೊಟ್ಟರು.

"P. C. 385 was deputed to trace and secure Ravindra.

On 18-4-1980, Ravindra was secured and he was questioned and his statement was recorded. According to his statement, on 26-3-1980 at about 2 00 P. M. the said Krishna came to his house and both of them went for a Tea shop in Hosamane road and met Lawrence in that shop. At that time Khadar of Hosamane along with one Byra and another person came to the said shop. Khadar invited him and Krishna for a party. Khadar took Krishna, Lawrence, Papanna and the witness with some of his friends to Guddada neralekere by about 7-00 P. M. Khadar asked the witness and others to get down from the Autorikshaw and went inside the village. After some time, Khadar alone came in the Autorikshaw and when the witness enquired the whereabouts of Krishna and Lawrence, Khadar stated that they were drunk and quarrelling and walking towards Veerapura Then, the witness was dropped by Khadar in the Autorikshaw near Hosamane Circle. Afterwards, he has not seen neither Khadar nor Krishna."

This is the statement.

"On 19-4-1980, P.S.I. secured Papanna and Kumar and recorded their statements which corroborated that of Ravindra.

P. C. 385 who had been deputed to trace the other persons reported that they could not be found. He also reported that Lawrence had gone to Bangalore and that he had advised the mother of Lawrence to get him back immediately. P. S. I. secured Rahiman, the brother of Khadar, Dhanasekhar and Yelloji Rao (said to be friends of Khadar) and when he questioned them about the whereabouts of Khadar, he was told that they had not seen him since 15 to 20 days.

SRI. S. R. BOMMAI.—This was on what date ?

SRI. R. GUNDU RAO.—This was on 19-4-80.

[On 20th April, P.S.I. deputed P.C. 385 to trace and secure Samaulla, Khadar and Mohammad and to trace the Auto-rikshaw. The said P. S. I. reported in the evening that he had not succeeded in tracing them.

On 21-4-1980, at about 9.00 P. M., Lawrence appeared before the P.S.I. and gave a statement that on 26-3-1980 at about 7.00 P. M. Khadar took him along with Ravindra, Krishna, Papanna and Mohamad in an Autorikshaw to Guddadaneralakere Village. Then, after making others to get down from the Autorikshaw and asking them to wait, Khadar took the Autorikshaw himself and went inside the village and after some time came back and took Lawrence and Krishna in the Autorikshaw by telling the others to wait. Khadar drove the Autorikshaw and stopped near the house and took Krishna and Lawrence inside the house through the rear door. There were 3 persons sitting in the house with a burning kerosene lamp. Khadar bolted the door from inside and assaulted by kicking him on his chest and face. Lawrence became unconscious. When he regained conscious, he saw Krishna was gasping for breath and he was throttled to death by Khadar who was pressing the neck of Krishna by putting his legs on his neck and another person was pressing his legs on the chest of the deceased (Krishna) on the ground that Krishna was passing on the information about Khadar's activities to Hindu Mahasabha. The witness saw all this by pretending as though he was unconscious, Consequently, Khadar along with the help of others transported the dead body of Krishna in the Autorikshaw up to Bhadra Reservoir Project Channel and dumped the dead body into the said channel.

Immediately, the statement was reduced to writing and the complaint Crime No. 88/1980 was altered to Sec. 302 and Sec. 201 I. P. C. and FIR.........

SRI J. H. PATEL.—I rise on a point of order, Sir, The Hon. Leader of the House is speaking about the subject which is a sub-judice. What we were speaking yesterday, was on a different point Now, the question of murder of Krishna.........

ಶ್ರೀ ಆರ್. ಗುಂಡೂರಾವ್.—ನಿನ್ನೆ ದಿವಸ ನೀವು ಕೇಳಿದ್ದಕ್ಕೆ ನಾನು ಇದನ್ನೆಲ್ಲ ಹೇಳುತ್ತಿದ್ದೇನೆ ಈ ಪ್ರಕರಣದ ಬಗ್ಗೆ ಸ್ಥಳೀಯ ಪೋಲೀಸರು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡಿದೆ ಎಂದು ನಿನ್ನೆ ತಾವೆಲ್ಲರೂ ಹೇಳಿದಿರಿ. ಅದು ಆ ರೀತಿಯಾಗಿಲ್ಲವೆಂದು ತಿಳಿಸುವುದಕ್ಕೆ ನಾನಿದನ್ನೆಲ್ಲ ಹೇಳುತ್ತಿದ್ದೇನೆ.

SRI S. R. BOMMAI.—Already, the statements of the witnesses have been recorded-

SRI R. GUNDU RAO.—So, there is no sub-judice.

The CrimeNo. 88/1980 was altered to Sec. 302 and Sec 201 I P.C. and F.I.R. was sent to the Superiors, As the scene of the alleged offence was within the Bhadravathi Rural Police Station, the case was transferred tothat Station on 22-4-80.

On 22-4-1980, the P.S.I. Bhadarvathi Rural Police Station registered the case as crime No. 85/1980 under section 302 and 201 I.P C. and issued fresh F.I.R. The same day, C.P.I. S. B. Wani took over further investigation and after examining the records, questioned the complainant and Lawrence. Thereafter, a Mahazar at the spot was drawn up and Police were deputed to trace the body of Krishna in the Bhadra Right Bank Canal and to secure Khadar, said to be the principal accused and the withnesses Ravindra, Kumar, and Papanna.

On 23-4-80 PSI after visiting Channagiri and other places, reported that the body of Krishna was not traced. Same day, Ravindra was secured and his further statement recorded. The C.P.I. himself tried to trace the accused and the Autorickshaw.

On-24-4-1980C.P.I. sent a requisition to the Superintending Engineer and the Executive Engineer, requesting for water in Bhadra Right Bank Channal being stopped, so as to help in the search for body of Krishna.

Same day. C.P.I. went to Nyamati to check up the body of an unidentified person, but found it did not tally with that of Krishna.

Same day, the Asst. Engineer replied pleading inability to stop water as the crops were getting ready for harvest. The C.P.I. further examined Papanna and Krishna-whose earier statements had corroborated that of Lawrence. Same day P.C. 711 was deputed to collect information about the whereabouts of the other accused and to ascertain the name of the person in whose house the occurrence allegedly took place. The Traffic Police were also requested to trace the Autorickshaw.

On 25-4-1980 P.C. 711 reported that the house belonged to one Anwar and he was not traced.

On 26-4-1980 C. P. I, made efforts to trace Khadar and other accused and visited Guddadaneralekere but did not succeed. He learnt that some persons were missing from the village after the date of the incident.

On 28-4-1980 Further efforts to trace Khadar and other accused were made, but they could not be traced.

On 1-5-1980 efforts to trace accused continued and reports received that they could not be traced.

On 4-5-1980 C,O.D. took over investigation.

The foregoing chronology of events shows that immediately on receipt of the complaint of Raju on 15-4-1980, case of missing person was registered and efforts to trace Krishna went on day today and immediately after the statement of Ravindra on 18-4-1980, Papanna and Kumar were secured and their statements recorded on 19 4-1980 and at once immediate steps were taken to trace Lawrence ; Rahiman and Dhanasekhar and Yelloji Rao were questioned ; on recording the statement of Lawrence on 21-4-1980, the Crime was altered-Sec. 302 and Sce 201 IPC and investigation was thoroughly made in all directions and efforts to secure Khadar were intensified. There was absolutely no delay and between 15-4-1980 (the date of complaint)and 4-5-1980 when the C.O.D. took over, a major part of the investigation had been made. The matter was entrusted to the C. O. D. on 4-5-1980 to allay any apprehension in the minds of the public and to infuse confidence that the investigation initially made by the Bhadravathi Police would be completed efficiently and without any interference.

The H and B Squad of the Crops of Detectives took over the nvesitigation of this case on 4-5-1980, on a request made by the Inspector general of Police, Karnataka State, During the course of investigation, the C.O.D. secured and recorded the statements of several witnesses including a few eye-witnesses. One Jaffrulla who had assisted Khadar and others in disposing of the deadbody, was arrested on 8-5-1980 at Bhadravathi and he was remanded to judicial custody. At the instance of the police the Bhadra Right Bank Canal was drained in order to search for the deadbody alleged to have been disposed of in that canal. Some bones were recovered from the canal at a place about 100 yards below the spot where the deadbodywas alleged to

have been thrown into the canal. The bones have been sent to the Expert examination and his opinion is awaited. After exhaustive investigation and collecting confidential information 3 more accused were arrested. Accused Ahamed was arrested in the early hours of 22-5-1980 in a village near Gubbi (Tumkur District); accusedAnwar in a hotal at Bangalore on the morning of 22-5-1980; and accused Babu at Channagiri on the same day (22-5-1980); A wrist-watch belonging to the deceased was seized from the person of accused Anwar at the time of his arrest. All the 3 accusd persons were remanded to judicial custody. The main accused C. M. Khadar surrendered before the Investigating Officer of the C. O. D. on 27-5-1980 at Bhadravathi He was remanded to Police custody for 5 days for the purpose of investigation, and later, he was remanded to judicial custody.

After completing the investigation, the Investigating Officer of the COD, placed a chargesheet before the Judicial Magistrate of Bhadravathi against accused Khader, Anwar, Ahamed and Babu u/s. 302 r/w. 34 IPC., and against these 4 and accused Jaffrulla u/s. 201r/w. 34 I.P,C on 7-6-1980. The Magistrate took the case on file inC.C. No. 1501/80. The case is now pending before the Court. Case comitted to Sessions on 7-6-1980."

ಇದು ಪ್ರತಿನಿತ್ಯ ಈ ಕೊಲೆ ಪ್ರಕರಣದಲ್ಲಿ ನಡೆದಂತಹ ವಿಚಾರ ತಮ್ಮ ಮುಂದೆ ಇಟ್ಟಿದ್ದೇನೆ. ನಿನ್ನೆ ದಿವಸ ಮಾನ್ಯ ಸದಸ್ಯರು ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಡಿಲೇ ಅನ್ನುವ ಪ್ರಶ್ನೆ ಇಲ್ಲವೇ ಇಲ್ಲ. ಪ್ರತಿ ದಿವಸ ಪೋಲೀಸಿನವರು ಅಪರಾಧಿಗಳನ್ನು ಪತ್ತೆ ಮಾಡುವುದರಲ್ಲಿ ಪ್ರಯತ್ನ ಮಾಡಿದ್ದಾರೆ, ಅಲ್ಲಿರತಕ್ಕಂತಹ ಲೋಕಲ್ ಸಬ್ ಇನ್ಸ್‌ಪೆಕ ರ್‌ರವರಾಗಲಿ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್‌ರವರಾಗಲಿ ಯಾರೂ ಇದರ ಬಗ್ಗೆ ಡಿಲೇ ಮಾಡಿಲ್ಲ. ಕೂಡಲೇ ಎಲ್ಲ ಕ್ರಮ ಕೈಗೊಂಡಿದ್ದಾರೆ. ಅಪರಾಧಿಯನ್ನು ಅರೆಸ್ಟ್ ಮಾಡಿದ್ದಾರೆ. ಮತ್ತೆ ನಾಲೆಯಲ್ಲಿದ್ದಂತಹ ಹೆಣವನ್ನು ಹೊರಗಡೆ ತೆಗೆಯಬೇಕಾಗಿದ್ದರೆ ನಾಲೆಯಲ್ಲಿದ್ದಂತಹ ನೀರನ್ನು ನಿಲ್ಲಿಸಬೇಕು. ಅದಕ್ಕಾಗಿ ಭದ್ರಾ ನಾಲೆಯ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರಿಗೆ ಅಲ್ಲಿಯ ಲೋಕಲ್ ಸಬ್ ಇನ್ಸ್‌ಪೆಕ್ಟರ್ ರವರು ಕೂಡಲೇ ಕಾಗದ ಬರೆದು ನಾಲೆಯ ನೀರನ್ನು ಕೂಡಲೇ ನಿಲ್ಲಿಸಬೇಕು, ಏಕೆಂದರೆ ಅದರಲ್ಲಿ ಕೃಷ್ಣನ ಸತ್ತ ಹೆಣದ ಅವಶೇಷ ಇರುವುದೆಂಬ ನಂಬಿಕೆ ಇದೆ, ಎಂಬುದಾಗಿ ಕಾಗದ ಬರೆದು ತಿಳಿಸಿದ್ದಾರೆ. ಅದಕ್ಕೆ ಸೂಪರಿಂಟೆಂಡೆಂಟ್ ಇಂಜಿನಿಯರ್ ರವರು ಒಪ್ಪದ ಬೆಳೆ ಹಾಳಾಗುತ್ತದೆ, ನನಗೆ ನೀರನ್ನು ನಿಲ್ಲಿಸುವಂತಹ ಅಧಿಕಾರ ಇಲ್ಲ, ಎಂಬುದಾಗಿ ಹೇಳಿದ್ದಾರೆ. ಮತ್ತೆ ಈ ವಿಷಯವನ್ನು ಸಿ.ಓ.ಡಿ.ಗೆ ಒಪ್ಪಿಸಿದ ಮೇಲೂ ಸ್ಥಳೀಯ ಪೋಲೀಸರು ತಮ್ಮ ಕರ್ತವ್ಯವನ್ನು ಯಾರೊಬ್ಬರ ಹಸ್ತಕ್ಷೇಪಕ್ಕೂ ತಲೆಬಾಗಿಲ್ಲ, ಯಾವುದೇ ರೀತಿಯ ಪ್ರಭಾವಕ್ಕೂ ಒಳಗಾಗದೆ ತಮ್ಮ ಕರ್ತವ್ಯವನ್ನು ನಡೆಸಿಕೊಂಡು ಬಂದಿದ್ದಾರೆ.

ಶ್ರೀ ಡಿ. ದೇವರಾಜ ಅರಸು.—ಈ ವಿಷಯವನ್ನು ಸಿ.ಓ.ಡಿ.ಗೆ ವಹಿಸಿದ್ದು ಯಾವ ಕಾರಣದಿಂದ ?

ಶ್ರೀ ಆರ್. ಗುಂಡೂರಾವ್.—ಈ ಬಗ್ಗೆ ಸ್ಥಳೀಯ ಪೋಲೀಸಿನವರು ತಮ್ಮ ಕರ್ತವ್ಯವನು ನಿರ್ವಹಿಸುವಂತಹ ಸಂದರ್ಭದಲ್ಲಿ ಸಾಕಷ್ಟು ವಿಚಾರಗಳು ಸಾರ್ವಜನಿಕರಿಂದ ಬಂದಿವೆ. ಶ್ರೀ ಖಾದರ್

ಅಪರಾಧಿಯಾಗಿದ್ದರೂ ಅವರ ಅಣ್ಣ ಶ್ರೀಮಾನ್ ಇಬ್ರಾಹಿಂ ರವರು ರಾಜ್ಯದ ಮಂತ್ರಿಮಂಡಲದಲ್ಲಿ ಒಬ್ಬರು ಮಂತ್ರಿಯಾಗಿದ್ದಾರೆ, ಅವರು ತಮ್ಮ ಪ್ರಭಾವದಿಂದ ಸ್ಥಳೀಯ ಪೋಲೀಸರನ್ನು ಹೆದರಿಸಿ ಅಥವಾ ಸ್ಥಳೀಯ ಪೋಲೀಸರು ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಡ್ಡಿ ಮಾಡುವಂತೆ ಕಂಡುಬರುತ್ತಿದೆ ಎಂಬುದಾಗಿ ನಾನಾ ರೀತಿಯಲ್ಲಿ ಟೀಕೆಗಳನ್ನು ಮಾಡಿದ್ದಾರೆ ಇದರ ಬಗ್ಗೆ ಸ್ಥಳದಲ್ಲಿ ಸಭೆಗಳನ್ನು ನಡೆಸಿದ್ದಾರೆ. ಮತ್ತೆ ಪತ್ರಿಕೆಗಳಲ್ಲೂ ಬರೆದಿದ್ದಾರೆ. ಯಾವಾಗ ಒಂದು ಸಂಶಯ ಯಾರು ವ್ಯಕ್ತಪಡಿಸಿದ್ದಾರೆಂದರೆ ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಈ ತರಹದ ಹಸ್ತಕ್ಷೇಪವನ್ನು ಯಾವ ಹಂತದಲ್ಲೂ ಶ್ರೀಮಾನ್ ಇಬ್ರಾಹಿಂ ರವರು ಮಾಡಿಲ್ಲ. ಯಾವುದೇ ಒಂದು ಹಂತದಲ್ಲೂ ಅಂದರೆ ಅಲ್ಲಿ ಪೋಲೀಸ್ ಸ್ಟೇಷನ್‌ನಲ್ಲಿ ಅಥವಾ ಯಾರ್ಯಾರು ಈ ಬಗ್ಗೆ ವಿಚಾರಣೆ ಮಾಡುತ್ತಿರತಕ್ಕಂತಹ ಅಧಿಕಾರಿಗಳಿಗಾಗಲಿ, ಅಥವಾ ರಾಜ್ಯ ಮುಖ್ಯ ಮಂತ್ರಿಗಳಿಗಾಗಲೀ ಅಥವಾ ಗೃಹ ಖಾತೆಯ ಮಂತ್ರಿಗಳಿಗಾಗಲೀ ಯಾವುದೇ ಒಂದು ಸಂದರ್ಭದಲ್ಲೂ ಹಸ್ತಕ್ಷೇಪವನ್ನು ಶ್ರೀಮಾನ್ ಇಬ್ರಾಹಿಂ ರವರು ಮಾಡದೇ ಇದ್ದರೂ ಅವರು ರಾಜೀನಾಮೆಯನ್ನು ಏಕೆ ಕೊಡಬೇಕು. ಆದರೂ ಶ್ರೀಮಾನ್ ಇಬ್ರಾಹಿಂ ರವರು ರಾಜ್ಯದ ಮಂತ್ರಿಯಾಗಿರುವುದರಿಂದ, ಈ ಕೇಸು ಸರಿಯಾಗಿ ನಡೆಯುತ್ತದೆಯೋ ? ಎಂಬ ಸಂಶಯ ಸಾರ್ವಜನಿಕರ ಮನಸ್ಸಿನಲ್ಲಿರಬಾರದು, ಮತ್ತೆ ಯಾವಾಗ ರೆಗ್ಯೂಲರ್ ಪೋಲೀಸಿನವರಿಂದ ಸರಿಯಾಗಿ ವಿಚಾರಣೆ ಆಗುವುದಿಲ್ಲ ಎಂಬುದಾಗಿ ಸಾರ್ವಜನಿಕರು ತಿಳಿಸಿದಾಗ ಅದು ಸರ್ಕಾರದ ಗಮನಕ್ಕೆ ಬಂದಾಗ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು ಎಂಬ ಉದ್ದೇಶದಿಂದ ಸಿ.ಓ.ಡಿ.ಗೆ ಈ ಕೇಸನ್ನು ಒಪ್ಪಿಸಿರುವುದು.

೩-೦೦ ಪಿ.ಎಂ.

ಅಧ್ಯಕ್ಷರೆ, ಈ ವಿಷಯವನ್ನು ಸರ್ಕಾರಕ್ಕೆ ಬಚ್ಚಿಡಬೇಕು ಅಂತ ಉದ್ದೇಶವಿಲ್ಲ. ಈ ವಿಷಯದಲ್ಲಿ ಯಾರಾದರೂ ಹಸ್ತಕ್ಷೇಪ ಮಾಡಿದರೆ ಮಾಡಿಕೊಳ್ಳಲಿ ಅಂತ ಸರ್ಕಾರ ಇದ್ದಿದ್ದರೆ ಸಿ.ಓ.ಡಿಗೆ ಒಪ್ಪಿಸಂತ್ತಾ ಇರಲಿಲ್ಲ. ಇಲ್ಲಿ ಯಾವುದೇ ತರಹದ ಹಸ್ತಕ್ಷೇಪ ಇಲ್ಲ, ಸ್ಥಳೀಯ ಪೋಲೀಸರು ಯಾವುದೇ ಹಂತದಲ್ಲೂ ಯಾರ ಮಾತನ್ನು ಕೇಳಿಲ್ಲ, ಕೇಳುವಂತಹ ಸಂದರ್ಭ ಇಲ್ಲ, ಕೇಳುವ ಅವಶ್ಯಕತೆಯೂ ಇಲ್ಲ ಇದೇ ತರಹದ ವಿಚಾರಗಳು ಈ ಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಚರ್ಚೆಯಾಗಿವೆ. ಅನೇಕ ಸಂದರ್ಭಗಳಲ್ಲಿ ಗೃಹಮಂತ್ರಿಗಳು ಅನೇಕ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಸಿ.ಒ.ಡಿ ಗೆ ಯಾವಾಗ ಒಪ್ಪಿಸುತ್ತೇವೆ,ಪೋಲೀಸಿನವರು ಯಾವರೀತಿ ಕೆಲಸ ಮಾಡುತ್ತಾರೆ ಅಂತ ಸ್ಪಷ್ಟವಾಗಿ ಹೇಳಿದ್ದಾರೆ. ಸನ್ಮಾನ್ಯ ಸದಸ್ಯರು ಉದಾಹರಣೆಗಳನ್ನು ಕೊಟ್ಟು ದೇವೇಂದ್ರಪ್ಪ ರಾಜಿನಾಮೆ ಕೊಟ್ಟರು ಕಿತ್ತೂರ್ ಅವರು ರಾಸಾಮೆ ಕೊಟ್ಟರು ಅಂತ ಹೇಳಿದರು. ಇವೊತ್ತುಅಪರಾಧಿ ಸರಿಯೋ, ತಪ್ಪೋ ಅದನ್ನು ತೀರ್ಮಾನ ಮಾಡುವುದು ನ್ಯಾಯಾಲಯ. ಇವೊತ್ತಿನ ದಿವಸ ಎಷ್ಟೋ ಉದಾಹರಣೆಗಳು ಇವೆ. ನಮ್ಮ ಹಿಂದಿನ ಮಂತ್ರಿಮಂಡಲದ ಮೇಲೆ ಅನೇಕ ಅಪಾದನೆಗಳನ್ನುಮಾಡಿ ಹಿಂದಿನ ವಿರೋಧಪಕ್ಷದವರು ಗ್ರೋವರ್‌ಕಮಿಷನ್ ಮುಂದೆ ಆಪಾದನೆಗಳನ್ನು ಸಲ್ಲಿಸಿದ್ದರು. ಆ ಬಗ್ಗೆ ಪತ್ರಿಕೆಯಲ್ಲಿ ಬೇಕಾದಷ್ಟು ಬಂದಿವೆ. ಇವರು ಅಳಿಯನ ಮೇಲೆ, ತಮ್ಮನ ಮೇಲೆ, ತಂಗಿಯ ಮೇಲೆ ಅಣ್ಣಯ ಮೇಲೆ ಪ್ರಭಾವ ಬೀರಿದ್ದಾರೆ ಅಂತ ದಿನ ಪತ್ರಿಕೆಯಲ್ಲಿ ಬರುತ್ತಿತ್ತು. ಗ್ರೋವರ್ ಕಮಿಷನ್‌ಗೆ ರಿಪೋರ್ಟ್‌ಹೋಗುತ್ತಿತ್ತು. ಆಗ ಯಾರೂ ರಾಜೀನಾಮೆ ಕೊಡುವ ಅವಶ್ಯಕತೆ ಇರಲಿಲ್ಲ. ಮಾನ್ಯ ಕಿತ್ತೂರ್ ಅವರು ಆವರ ಮನಸ್ಸಿಗೆ ನಾನು ಅಪರಾಧಿಯಲ್ಲ ಅಂತ ತಿಳಿದಿದ್ದರೆ ಅವರು ರಾಜೀನಾಮೆಯನ್ನು ಕೊಡಬೇಕಾಗಿರಲಿಲ್ಲ. ಅವರು ರಾಜೀನಾಮೆಯನ್ನು ಕೊಟ್ಟರು ಮೊದಲು ಕಿತ್ತೂರ್ ಅವರು ಅಪರಾಧಿ ಅಂತ ಪತ್ರಿಕೆಗಳವರು ಬೇಕಾದಷ್ಟು ಬರೆದಿದ್ದಾರೆ. ಆ ಪತ್ರಿಕೆಯ ಕಟಿಂಗ್ಸ್ ಕೆಲವು ಓದಬೇಕು ಅಂದರೆ ಕೆಲವನ್ನು ತಂದಿದ್ದೇನೆ.

"Was the Minister made Scapegoat ? 'Resigns in Girl's scandal Kittur quits Urs has open mind Enquiry to clear the dust" ThenC. M. Said.

SRI B. BASAVALINGAPPA.—Yesterday's debate was to clear the suspicion.

SRI R. GUNDU RAO.—In Kittur's case suspicion arose because enquiry had not taken place in the first instance. Here it is not so. Enquiry has taken place against the accused, There is no enquiry

against Sri C. M. Ibrahim; Minister for Labour and Employment. ಇವೊತ್ತು ಇಬ್ರಾಹಿಂ ಅವರು ತಪ್ಪು ಮಾಡಿದ್ದರೆ, ಅವರಿಗೆ ಸರ್ಕಾರ ರಕ್ಷಣೆ ಕೊಟ್ಟಿಲ್ಲ. ಪೋಲೀಸಿನವರು ಅವರನ್ನು ಬಿಟ್ಟಿಲ್ಲ. ಸರ್ಕಾರ,ಯಾವುದೇ ರೀತಿಯ ಕ್ರಮ ತೆಗೆದು ಕೊಳ್ಳದೇ ಸುಮ್ಮನೆ ಕುಳಿತುಕೊಂಡಿಲ್ಲ ಈ ಪುಕಾರುಗಳು ಸಿಕ್ಕಿದ ಒಂದೂವರೆ ತಿಂಗಳೊಳಗೆ ವಿಚಾರಣೆ ಮಾಡಿ ಕೇಸ್ ರಿಜಿಸ್ಟರ್ ಮಾಡಿ ಅಪರಾಧ ಗಳನ್ನು ಪತ್ತೆ ಮಾಡಿ ಕೇಸ್ ಸೆಷನ್ ಕೋರ್ಟಿನಲ್ಲಿ ನಡೆಯುತ್ತಿದೆ. ಈಗ ಇಲ್ಲಿಯ ಉದ್ದೇಶ ಏನು ಹಸ್ತಕ್ಷೇಪ ಮಾಡುತ್ತಾರೆ ಅಂತ ಅಭಿಪ್ರಾಯ ಬಂದಿದೆ. ಇಬ್ರಾಹಿಂ ಅವರು ರಾಜೀನಾಮೆಯನ್ನು ಕೊಡಬೇಕು ಅಂತ ಬಂದಿದೆ. ಶ್ರೀಮಾನ್ ಜೆ.ಹೆಚ್. ಪಟೇಲರು ಎರಡು ಜನರನ್ನು ಉದಾಹರಣೆ ಕೊಟ್ಟು ಹೇಳಿದರು. ಲಾಲ್‌ಬಹದ್ದೂರ್ ಶಾಸ್ತ್ರಿಯವರು ರಾಜೀನಾಮೆಯನ್ನು ಕೊಟ್ಟರು, ಕರುಣಾ ಕರನ್ ರಾಜೀನಾಮೆಯನ್ನು ಕೊಟ್ಟರು ಅಂತ ಹೇಳಿದರು ಬಾಕಿ ಏನೂ ಹೇಳಲಿಲ್ಲ, ಅವರಿಗೆ ಅನುಕೂಲ ವಾಗಿದ್ದನ್ನು ಅವರು ಹೇಳಿದರು. ಜನತಾ ಸರ್ಕಾರ ಇದ್ದ ಕಾಲದಲ್ಲಿ ಬೇಕಾದಷ್ಟು ಮರ್ಡರ್ ಆಯಿತು. ಬೆಲ್ಚಿಯಲ್ಲಿ ಹರಿಜನರ ಕೊಲೆ ಆಯಿತು, ಆಗ ಯಾವ ಗೃಹಮಂತ್ರಿಯೂ ರಾಜೀನಾಮೆಯನ್ನು ಕೊಡಲಿಲ್ಲ ಯಾವ ಪ್ರಧಾನ ಮಂತ್ರಿಯೂ ರಾಜೀನಾಮೆಯನ್ನು ಕೊಡಲಿಲ್ಲ. ಆಗ ರಾಜೀನಾಮೆಯನ್ನು ಕೊಡಿ ಅಂತ ಹೇಳುವ ತಾಕತ್ತು ಯಾವ ಪಾರ್ಲಿಮೆಂಟ್ ಸದಸ್ಯರಿಗೂ ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೆಲ್ಚಿಯಲ್ಲಿ ಘಟನೆ ಆದಾಗ ಸರ್ಕಾರ ಕಿತ್ತು ಹಾಕಿದರು. ಇಲ್ಲಿ ಮಂತ್ರಿಯನ್ನು ತೆಗೆಯಲಿಕ್ಕೆ ಹಿಂದೆ ಮುಂದೆ ನೋಡುತ್ತಿದ್ದೀರಾ.

ಶ್ರೀ ಆರ್. ಗುಂಡೂರಾವ್.—ಇವೊತ್ತಿನ ದಿವಸ ಎಂ.ಎಲ್.ಎ. ಗಳಿಗೆ, ಎಂ.ಪಿ. ಗಳಿಗೆ ಅಣ್ಣ ತಮ್ಮಂದಿರು ನೆಂಟರು ಇರುವುದಿಲ್ಲವೇನು. ಯಾವುದೋ ಒಬ್ಬ ಸದಸ್ಯರ ನೆಂಟರೋ ಅಥವಾ ಮಕ್ಕಳೋ ಏನೋ ಗಲಾಟೆ ಮಾಡಿದ ಅಂತ ಪುಕಾರ್ ಬಂದರೆ, ಯಾವುದೋ ಒಬ್ಬ ಸದಸ್ಯರ ಅಣ್ಣನೋ ತಮ್ಮನೋ ಕ್ಲಬ್‌ನಲ್ಲಿಯೋ ಅಂಗಡಿಯಲ್ಲೋ ಗಲಾಟೆ ಮಾಡಿದ ತಕ್ಷಣ ಪೋಲೀಸಿನವರು ಕೇಸ್ ಹಾಕುತ್ತಾರೆ. ಅದನ್ನು ಹೇಳಿದ ತಕ್ಷಣ ನೀವು ಸದಸ್ಯರಾಗಿ ಇರಕೂಡದು, ಪೋಲೀಸರ ಮೇಲೆ ಪ್ರಭಾವ ಬೀರುತ್ತೀರಾ ಅಂತ ಹೇಳಿದರೆ ಹೇಗೆ ಸಾಧ್ಯ. ಮೊರಾರ್ಜಿ ದೇಸಾಯಿ ಅವರ ಮಗನ ಮೇಲೆ ಫಾರಿನ್ ಎಕ್ಸ್‌ಚೇಂಜ್ ವಿಚಾರದಲ್ಲಿ ಗಲಾಟೆ ಆದಾಗ ಅದು ಚರ್ಚೆಯಾಗಿ ವಿಚಾರಣೆ ಮಾಡಬೇಕು ಅಂತ ಹೇಳಲಿಕ್ಕೆ ಮೂರುನಾಲ್ಕು ತಿಂಗಳು ಆಯಿತು. ಈಗ ವಿಚಾರಣೆ ಮಾಡುವುದು ಬರುವುದಿಲ್ಲ. ಆಗ ಮೊರಾರ್ಜಿ ದೇಸಾಯಿ ಅವರು ರಾಜೀನಾಮೆಯನ್ನು ಕೊಡಲಿಲ್ಲ. ಈಗ ಒಬ್ಬರಿಗೊಬ್ಬರು ಸಂಬಂಧ ಇರುವವರೇ ಇರುವುದು. ಇವೊತ್ತು ತಮ್ಮ ಅಧಿಕಾರದ ಪ್ರಭಾವವನ್ನು ಮುಖ್ಯ ಮಂತ್ರಿಯವರ ಹತ್ತಿರ ಬೀರಿ ಅಥವಾ ಗೃಹಮಂತ್ರಿಯವರ ಹತ್ತಿರ ಬೀರಿ ಈ ತರಹ ಸಹಾಯ ಮಾಡಬೇಕು ಅಂತ ಕೇಳಿಕೊಂಡಿದ್ದರೆ ಅಥವಾ ಪೋಲೀಸ್ ಅಧಿಕಾರಿ ಯನ್ನು ಕೇಳಿಕೊಂಡು ಈ ಕೇಸನ್ನು ಮುಚ್ಚಿಡಿ ಅಂತ ಹೇಳಿದ್ದರೆ, ಈ ತರಹ ಪುರಾವೆ ಒಂದನ್ನಾದರೂ ಒದಗಿಸಿದ್ದೇ ಆಗಿದ್ದರೆ ಈ ವಿಷಯವನ್ನು ಚರ್ಚೆ ಮಾಡುವುದು ಬೇರೆ ಪ್ರಶ್ನೆ. ಈ ಸದನದಲ್ಲೇ ಮಂತ್ರಿಗಳ ಸಂಬಂಧಿಕರ ಮೇಲೆ ಬೇಕಾದಷ್ಟು ಚರ್ಚೆಯಾಗಿವೆ, ಯಾರೂ ರಾಜೀನಾಮೆಯನ್ನು ಕೊಟ್ಟಿಲ್ಲ ಇಬ್ರಾಹಿಂ ಅವರ ತಮ್ಮನ ಹೆಸರು ಮೊದಲೇ ರೌಡಿ ಷೀಟ್‌ನಲ್ಲಿ ಇತ್ತು ಅಂತ ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದರು. ಅವರು ಮಂತ್ರಿಯಾದ ಮೇಲೆ ಇಲ್ಲ. ಅವರ ತಮ್ಮನ ನಡವಳಿಕೆ ಬೇರೆ, ಅಣ್ಣತಮ್ಮಂದಿರಲ್ಲಿ ಭಿನ್ನತೆ ಇದ್ದೇ ಇರುತ್ತದೆ. ಅಣ್ಣನ ನಡವಳಿಕೆ ಇದ್ದ ಹಾಗೆ ತಮ್ಮನ ನಡವಳಿಕೆಯೂ ಇರುತ್ತದೆ ಅಂತ ಯಾವ ರಾಜ್ಯದಲ್ಲೂ ಇಲ್ಲ ಯಾವ ಪುರಾಣದಲ್ಲೂ ಇಲ್ಲ. ಅಣ್ಣನ ನಡವಳಿಕೆಯೇ ಒಂದು ತರಹ ಇರುತ್ತದೆ. ತಮ್ಮನ ನಡವಳಿಕೆಯೇ ಒಂದು ತರಹ ಇರುತ್ತದೆ ಇವೊತ್ತು ಅವರ ತಮ್ಮ ಈ ತರಹ ಆಪಾದನೆ ಮಾಡಿದ್ದಾನೆ. ಅದು ತೀರ್ಮಾನ ಆಗುವವರೆಗೂ ಅವರಿಂದ ರಾಜೀನಾಮೆಯನ್ನು ತೆಗೆದುಕೊಂಡು ಹೊರಗಡೆ ಇಟ್ಟು, ತೀರ್ಮಾನ ಆದಮೇಲೆ ಒಳಗಡೆ ತೆಗೆದುಕೊಳ್ಳಿ ಅಂತ ಹೇಳಿದರೆ ಕ್ಯಾಬಿನೆಟ್‌ಗೆ ಹೋಗುವುದು ಬರುವುದು ಮಕ್ಕಳ ಆಟ ಏನು ? ಇವೊತ್ತು ಆಪಾದನೆ ಬಂದಿದೆ ಅಂತ ಪತ್ರಿಕೆಯಲ್ಲಿ ಬಂದಿದ್ದರೆ ರಾಜಿನಾಮೆ ಕೊಟ್ಟು ನಾಳೆ ಆಪಾದನೆ ಇಲ್ಲ ಅಂತ ಜಡ್ಜ್‌ಮೆಂಟ್ ಕೊಟ್ಟರೆ ವಾಪಸ್ಸು ತೆಗೆದುಕೊಳ್ಳಬೇಕೇನು ? ಅವರ ಮೇಲೆ ಏನಾದರೂ ನೇರವಾದ ಆಪಾದನೆ ಇದೆಯೇ ? ಪೋಲೀಸಿನವರು ಯಾವುದೇ ಒಂದು ಸಂದರ್ಭದಲ್ಲಿ ಯಾಗಲಿ ಅವರ ಚಾರ್ಜ್‌ಷೀಟ್‌ನಲ್ಲಿಯಾಗಲಿ, ಯಾವುದೇ ಒಂದು ಸಂದರ್ಭದಲ್ಲಿಯಾಗಲಿ ಅವರ ಹಸ್ತಕ್ಷೇಪ ಇದೆ ಅಂತ ಹೇಳಿಲ್ಲ. ಮಾನ್ಯ ಸದಸ್ಯರು ಆ ತರಹ ಇದ್ದುದನ್ನು ನನ್ನ ಗಮನಕ್ಕೆ ತಂದಿದ್ದರೆ ತಮ್ಮ ಮಾತನ್ನು ಕೇಳಬಹುದಿತ್ತು.

ನಾಳೆ ದಿವಸ ಜಡ್ಜ್‌ಮೆಂಟ್‌ಬಂದಾಗ ಏನಾಗುತ್ತದೆಂಬುದು ಯಾರಿಗೂ ಗೊತ್ತಾಗುವುದಿಲ್ಲ. ಅಲ್ಲಿ ಅಪರಾಧಿಯನ್ನು ನಿರಪರಾಧಿ ಎಂಬುದಾಗಿ ಮಾಡಿದರೂ ನಾವು ಏನನ್ನು ಮಾಡುವುದಕ್ಕಾಗುವುದಿಲ್ಲ. ನ್ಯಾಯಾಧೀಶರು ಕೊಟ್ಟಂತಹ ತೀರ್ಪಿಗೆ ನಾವೆಲ್ಲರೂ ತಲೆಬಾಗಲೇಬೇಕು. ಅದೇ ರೀತಿ ನಿರಪರಾಧಿಯನ್ನು ಅಪರಾಧಿ ಎಂಬುದಾಗಿ ತೀರ್ಪು ಕೊಟ್ಟರೂ ಅದಕ್ಕೆ ತಲೆಬಾಗಲೇಬೇಕು. ಮತ್ತೊಂದು ಹಿಂದೆ ನಡೆದಂತಹ ಘಟನೆ ನನ್ನ ನೆನಪಿಗೆ ಬರುತ್ತದೆ ಅದು ಬಳ್ಳಾರಿ ಜಿಲ್ಲೆಯಲ್ಲಿ ಎಂದು ಕಾಣುತ್ತದೆ. ಅಲ್ಲಿ ಒಂದು ಬಸ್ಸಿನಲ್ಲಿ ಮ್ಯಾಜಿಸ್ಟ್ರೇಟ್‌ರೊಬ್ಬರು ಪ್ರಯಾಣ ಮಾಡುತ್ತಿದ್ದರು. ಆ ಬಸ್ಸಿನಲ್ಲಿದ್ದಂತಹ ಪ್ರಯಾಣಿಕರಲ್ಲಿ ಇಬ್ಬರ ಮೇಲೆ ವೈರತ್ವವನ್ನು ತೀರಿಸಿಕೊಳ್ಳುವುದಕ್ಕಾಗಿ ರಸ್ತೆಗೆ ಅಡ್ಡಲಾಗಿ ಕಲ್ಲುಗಳನ್ನು ಇಟ್ಟು ಒಬ್ಬರನ್ನು ಹೊರಗೆ ಎಳೆದುಕೊಂಡು ಹೋಗಿ ಕೊಲೆ ಮಾಡಿದ್ದಾರೆ. ಇದಕ್ಕೆ ಮ್ಯಾಜಿಸ್ಟ್ರೇಟರ್‌ರವರೇ ಸಾಕ್ಷಿಯಾಗಿದ್ದರೂ ಕೂಡ ಕೊನೆಗೆ ಕೋರ್ಟಿನಲ್ಲಿ ನಿರಪರಾದಿ ಅಂತ ತೀರ್ಮಾನ ಮಾಡಿದ್ದಾರೆ. ಈ ವಿಷಯವನ್ನು ತೀರ್ಮಾನ ಮಾಡತಕ್ಕಂತಹ ಅಧಿಕಾರ ನಮಗಿಲ್ಲ. ಆ ಅಧಿಕಾರ ನ್ಯಾಯಾಲಯಕ್ಕೆ ಇದೆ. ಆ ತೀರ್ಮಾನಕ್ಕೆ ನಾವೆಲ್ಲರೂ ತಲೆಬಾಗಲೇಬೇಕು. ನಾನು ಈ ರಾಜ್ಯದ ಗೃಹ ಮಂತ್ರಿಯಾಗಿ ಹಾಗೂ ಮುಖ್ಯಮಂತ್ರಿಯಾಗಿ ನಾನು ಹೇಳುವುದೇನೆಂದರೆ, ಯಾವ ವಿಧದಲ್ಲೂ ನನ್ನ ಸಹೋದ್ಯೋಗಿ ಶ್ರೀಮಾನ್ ಇಬ್ರಾಹಿಂ ರವರು ಇವತ್ತಿನವರೆಗೂ ಈ ವಿಷಯದಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ಮಾಡಿಲ್ಲ. ಈ ವಿಚಾರದ ಬಗ್ಗೆ ನನ್ನ ಹತ್ತಿರ ಇದುವರೆಗೂ ಅವರು ಮಾತನಾಡಿಲ್ಲ. ಅವರು ಯಾರ ಹತ್ತಿರ ಮಾತನಾಡಬೇಕಿತ್ತು? ಎಂದರೆ ಈ ರಾಜ್ಯದ ಗೃಹ ಖಾತೆ ಮಂತ್ರಿಯೂ ನಾನೇ ಆಗಿರುವುದರಿಂದ ಅವರು ನನ್ನ ಹತ್ತಿರ ಈ ವಿಚಾರದ ಬಗ್ಗೆ ಹೇಳಬೇಕಾಗಿತ್ತು. ಈ ವಿಚಾರದ ಬಗ್ಗೆ ಐ.ಜಿ.ಪಿ.ಯವರನ್ನೋ ಅಥವಾ ಇನ್ಯಾರಾದರೋ ಪೋಲೀಸ್ ಅಧಿಕಾರಿಗಳನ್ನೋ ಕರೆಸಿ ಈ ವಿಚಾರದ ಬಗ್ಗೆ ಹೇಳಿ ಎಂಬುದಾಗಿ ನನ್ನ ಹತ್ತಿರ ಹೇಳಬೇಕಾಗಿತ್ತು. I am making it very very clear in this August House that not even on one occasion he has come and talked to me about this case. What more you want? The police have acted promptly on every occasion and they have done their duty; the COD have done their duty, they arrested the person, they have filed the charge-sheet and case is on trial now. ನಾಳೆ ದಿವಸ ನನ್ನ ತಮ್ಮನು ನನ್ನ ಊರಾದ ಕುಶಾಲನಗರದಲ್ಲಿ ಏನಾದರೂ ಗಲಾಟೆ ಮಾಡಿದರೆ, ಸಧ್ಯ ನನಗೆ ಅಣ್ಣ ತಮ್ಮಂದಿರು ಯಾರೂ ಇಲ್ಲ. ಪುಣ್ಯಕ್ಕೆ ಹೆಣ್ಣು ಮಕ್ಕಳೂ ಇಲ್ಲ. ಹೆಣ್ಣು ಮಕ್ಕಳೂ ಆಗುವುದೂ ಇಲ್ಲ. ಬಂದರೆ ಸೊಸೆಯಂದಿರು ಬರಬೇಕು ಅಷ್ಟೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಏಕೆ ಆಗುವುದಿಲ್ಲ? ಇದುವರೆಗಿನ ನಿಮ್ಮ ಪರಾಕ್ರಮವನ್ನು ನೋಡಿದರೆ ನಿಮಗೆ ಹೆಣ್ಣುಮಗಳು ಆದರೂ ಆಗಬಹುದು.

ಶ್ರೀ ಆರ್. ಗುಂಡೂರಾವ್.—ನಿಮಗೆ ಎಷ್ಟು ಜನ ಮಕ್ಕಳು?

ಶ್ರೀ ಕೆ.ಎಚ್, ಶ್ರೀನಿವಾಸ್.—ನನಗೆ ನಿಮಗಿಂತ ಒಂದು ಜಾಸ್ತಿ.

ಶ್ರೀ ಆರ್. ಗುಂಡೂರಾವ್.—೨೦ ಅಂಶದ ಕಾರ್ಯಕ್ರಮ ಇದ್ದಾಗ ಮಕ್ಕಳು ಜಾಸ್ತಿಯಾಗಬಾರದು ಎಂಬುದಾಗಿ ಹೇಳಿದ ಮೇಲೂ ಅವರಿಗೆ ಒಂದು ಮಗುವಾಗಲಿಲ್ಲವೇ?

(ನಗು)

ಶ್ರೀ ಕೆ.ಎಚ್. ಶ್ರೀನಿವಾಸ್.—ಅದಕ್ಕೆ ನಾನು ಜೊತೆಗೆ ಹೋಗಲಿಲ್ಲ.

ಶ್ರೀ ಆರ್. ಗುಂಡೂರಾವ್.—ಆದ್ದರಿಂದ ತಮ್ಮ ತಪ್ಪು ಮಾಡಿದ್ದಾನೆಂದರೆ ಅಣ್ಣ ರಾಜೀನಾಮೆ ಮಾಡಬೇಕೆಂಬುದು ಒಂದು ಕೆಟ್ಟ ಸಂಪ್ರದಾಯ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಮಾನ್ ಇಬ್ರಾಹಿಂರವರ ತಮ್ಮ ಅಪರಾಧಿಯಾಗಿದ್ದಾನೆ. ಅವನಿಗೆ ಕೋರ್ಟಿನಲ್ಲಿ ಶಿಕ್ಷೆಯಾಗುತ್ತದೆ. ರಾಜಕೀಯ ಜೀವನದಲ್ಲಿ ಇರಬಹುದು; ಅಂದರೆ ಮಂತ್ರಿಗಳಾಗಿರಬಹುದು, ಶಾಸಕರಾಗಿರಬಹುದು ಹಾಗೂ ಸಂಸತ್ ಸದಸ್ಯರಾಗಿರಬಹುದು ಅಥವಾ ಅಧಿಕಾರಿಗಳಾಗಿರಬಹುದು. ಎಲ್ಲರಿಗೂ ಸಂಬಂಧದವರು ಇದ್ದೇ ಇರುತ್ತಾರೆ. ಯಾರೊಬ್ಬರೂ ಸಂಬಂಧ ಇಲ್ಲದೆ ಅಧಿಕಾರದಲ್ಲಿರುವುದಕ್ಕೆ ಸಾಧ್ಯವೇ ಇಲ್ಲ, ಸಂಬಂಧ ಇದ್ದೇ ಇರುತ್ತದೆ. ತಮ್ಮ ಆಪಾದಿತ ಎಂದಾಕ್ಷಣ ಹಸ್ತಕ್ಷೇಪ ಮಾಡುತ್ತಾರೆಂದು ಹೇಳುವುದು ಸಾಧುವಾದುದಲ್ಲ. ತಮ್ಮ ಆಗಿರಬಹುದು, ತಮ್ಮನಿಗೂ

ಮಂತ್ರಿಗೂ ಏನು ಸಂಬಂಧ? ಇವರು ಶಾಸಕರಾಗಿದ್ದಾಗಲೂ ಅವನು ತಮ್ಮನಾಗಿದ್ದ. ಅವರು ವಿರೋಧ ಪಕ್ಷದಲ್ಲಿದ್ದಾಗಲೂ ತಮ್ಮ ಇದ್ದ. ಅವರು ವಿರೋಧ ಪಕ್ಷದಲ್ಲಿದ್ದಾಗ ಎಲ್ಲ ಕಡೆ ವಿರೋಧ ಪಕ್ಷದವರ ಜೊತೆಯಲ್ಲಿ ಭಾಷಣ ಮಾಡುತ್ತಿದ್ದಾಗಲೂ ಅವರಿಗೆ ತಮ್ಮ ಇದ್ದ. ಇವರು ಯಾವುದೇ ವಿಧದಲ್ಲೂ ಈ ವಿಚಾರದಲ್ಲಿ ಹಸ್ತಕ್ಷೇಪವನ್ನು ಮಾಡಿಲ್ಲ. ಭದ್ರಾವತಿಯಲ್ಲಿ ಅವರ ಮನೆ ಮುಂದೆ ಏಕೆ ಪೋಲೀಸ್ ವ್ಯಾನ್ ಇತ್ತು ಎಂದರೆ ಇವರ ತಮ್ಮ ಇಂತಹವನು ಎಂಬುದಾಗಿ ಗೊತ್ತಾದಾಗಲಿಂದ ನಾಳೆ ಒಂದು ಪರಿಸ್ಥಿತಿ ಬರಬಹುದು ನಮ್ಮ ಮಾನದ ಪ್ರಶ್ನೆ, ನಾಳೆ ರಾತ್ರಿಯು ಸಮಯದಲ್ಲಿ ನಮ್ಮ ಮನೆಯು ಮೇಲೆ ಯಾರಾದರೂ ಧಾಳಿ ಮಾಡಬಹುದು, ಅದಕ್ಕೆ ನಮಗೆ ರಕ್ಷಣೆ ಕೊಡಿ ಎಂಬುದಾಗಿ ಮನವಿ ಸಲ್ಲಿಸಿದರೆ ಪೋಲೀಸಿನವರು ರಕ್ಷಣೆ ಕೊಟ್ಟೇ ಕೊಡುತ್ತಾರೆ. ಇದರಲ್ಲಿ ವಿರೋಧ ಪಕ್ಷದವರು, ಆಳುವ ಪಕ್ಷದವರು ಎಂಬ ಭೇದ ಇಲ್ಲ. ಮಂತ್ರಿಗಳು ಮತ್ತೆ ಮುಖ್ಯಮಂತ್ರಿಗಳು ಅಂದರೆ ಸ್ವಲ್ಪ ಹೆಚ್ಚು ಜನ ಪೋಲೀಸಿನವರನ್ನು ರಕ್ಷಣೆಗಾಗಿ ಕೊಡಬಹುದು. ಸದಸ್ಯರು, ಯಾವುದೋ ಕಾರ್ಪೋರೇಷನ್ನಿನ ಚೇರ್ಮನ್ನೋ ಅಥವಾ ಮುನಿಸಿಫಲ್ ಪ್ರೆಸಿಡೆಂಟ್ ಡಿ.ಟಿ.ಬಿ. ಪ್ರೆಸಿಡೆಂಟ್ ರವರಿಗೆ ಸ್ವಲ್ಪ ಕಡಿಮೆ ಪೋಲಿಸರನ್ನು ರಕ್ಷಣೆಗಾಗಿ ಕೊಡಬಹುದು. ಅಂತೂ ಪೋಲಿಸಿನವರು ರಕ್ಷಣೆ ಕೊಟ್ಟೇ ಕೊಡುತ್ತಾರೆ. ವಿಷಯು ನಡೆದಿದೆ. ಬಹಳ ಮಹತ್ವಕೊಟ್ಟು ಕೆಲವು ಮಾನ್ಯ ಸದಸ್ಯರು ನಿನ್ನೆ ಪ್ರಸ್ತಾಪ ಮಾಡಿದ್ದಾರೆ. ಭದ್ರಾವತಿಯಲ್ಲಿ ಒಂದು ಮಹತ್ವದ ಬಂದ್ ಆಯಿತು, ಅಲ್ಲಿ ಇಡೀ ಭದ್ರಾವತಿಯಲ್ಲಿ ಅಂಗಡಿಗಳು ಮುಚ್ಚಿದ್ದವು. ಹೋಟೆಲ್‌ಗಳು ಮುಚ್ಚಿದ್ದವು, ಯಶಸ್ವಿ ಬಂದ್ ನಡೆಯಿತು ಎಂಬುದಾಗಿ ಹೇಳಿದ್ದಾರೆ. ಈ ರಾಜ್ಯದಲ್ಲಿ ಈ ತರಹ ಅನೇಕ ಬಂದ್‌ಗಳು ನಡೆದಿವೆ. ೧೫ ವರ್ಷಗಳಿಂದಲೂ ನಡೆಯುತ್ತಲೇ ಇವೆ. ಯಾವ ಬಂದ್‌ನಲ್ಲೂ ಅಂಗಡಿ ಬಾಗಿಲುಗಳನ್ನು ತೆಗೆಯುವುದೇ ಇಲ್ಲ ಮತ್ತೆ ಬಸ್‌ಗಳನ್ನು ನಿಲ್ಲಿಸುವುದಕ್ಕೆ ಅಂಗಡಿ ಬಾಗಿಲುಗಳನ್ನು ಮುಚ್ಚಿಸುವುದಕ್ಕೆ, ಸಿನೇಮಾ ನಿಲ್ಲಿಸುವುದಕ್ಕೆ ಊರಿನ ಜನವೇ ಬರಬೇಕಾಗಿಲ್ಲ. ೧೦ ಜನ ಬಂದು ಅಂಗಡಿ ಮುಂದೆ ನಿಂತು ಬಂದ್ ಮಾಡಿ ಇಲ್ಲದಿದ್ದರೆ ಕಲ್ಲು ಹೊಡೆಯುತ್ತೇವೆ, ಬಸ್ ನಿಲ್ಲಿಸಿ ಎಂಬುದಾಗಿ ಹೇಳಿದರೆ ಯಾರು ತಾನೇ ಬಾಗಿಲುಗಳನ್ನು ತೆಗೆಯುತ್ತಾರೆ? ಬಸ್‌ಗಳನ್ನು ಓಡಿಸುತ್ತಾರೆ? ಹೆದರಿಕೆಗಾಗಿ ಯಾರೂ ಬಾಗಿಲುಗಳನ್ನು ತೆಗೆಯುವುದೇ ಇಲ್ಲ. ಆದರೆ ಇಡೀ ಭದ್ರಾವತಿಯು ಜನ ಈ ಒಂದು ವಿಷಯದಲ್ಲಿ ಹಸ್ತಕ್ಷೇಪ ನಡೆಯುತ್ತಿದೆಯೋ, ಅಥವಾ ಏನು ಆಗುತ್ತದೆ ಎಂಬುದರ ದಿಶೆಯಲ್ಲಿ ಬಂದ್ ಆಚರಿಸಿದ್ದಾರೆ ಎಂಬುದು ಸರಿಯಲ್ಲ. ಇಂತಹ ಎಷ್ಟೋ ಕೊಲೆಗಳು ನಡೆದಿವೆ, ಬೇಕಾದಷ್ಟು ನಡೆದಿವೆ. ನಾನು ಬಹಳ ಹಿಂದೆ ಹೋಗುವುದಿಲ್ಲ ಕರ್ನಾಟಕ ಆದ ಮೇಲೆ ಅಂದರೆ ೧೯೫೬ ನೇ ಇಸವಿ ನವೆಂಬರ್ ತಿಂಗಳು ಒಂದನೇ ತಾರೀಖಿನಿಂದ ಶ್ರೀಮಾನ್ ನಿಜಲಿಂಗಪ್ಪನವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕಾರ ಮಾಡಿದಾಗಿನಿಂದ ಈವತ್ತಿನವರೆಗೂ ಅಂದರೆ ೧೯೮೦ನೇ ಇಸವಿ ಜನವರಿ ೧೦ನೇ ತಾರೀಖಿನವರೆಗೂ ಈ ದೇಶದಲ್ಲಿ ಎಷ್ಟು ಕೊಲೆಗಳಾಗಿವೆ ಎಂಬುದರ ಬಗ್ಗೆ ಪೋಲೀಸ್ ಇಲಾಖೆಯು ಡಿಮ್ಯಾಂಡ್ ಬಂದಾಗ ಅಂಕಿ ಅಂಶಗಳನ್ನು ಬೇಕಾದರೆ ಇಡೋಣ. ಕೊಲೆಯಾಗಬೇಕೆಂಬುದು ಯಾರೊಬ್ಬರ ಇಚ್ಛೆ ಏನೂ ಇಲ್ಲ. ಯಾರ್ಯಾರ ಕಾಲದಲ್ಲಿ ಎಷ್ಟೆಷ್ಟು ಕೊಲೆಗಳಾಗಿವೆ ಎಂಬುದರ ಬಗ್ಗೆ ವಿವರ ಕೊಡುತ್ತೇನೆ. ನಿನ್ನೆ ದಿವಸ Sri C.M. Arumugham said that the deceased is a harijan. Yes, it is true. Murder is a murder. Whether one is a Christian, Harijan, Muslim, Brahamin, Lingayat, Vakkaliga or one belongs to a backward or forward community, murder is a murder. The same analogy, the same law will apply to everybody. There are no different Sections for different murders. ೧೯೬೫ನೇ ಇಸವಿಯಿಂದ ೧೯೮೦ನೇ ಇಸವಿಯು ಜನವರಿ ೧೦ನೇ ತಾರೀಖಿನವರೆಗೆ ಎಷ್ಟೆಷ್ಟು ಮರ್ಡರ್ ಗಳಾಗಿವೆ ಎಂಬುದರ ಬಗ್ಗೆ ವಿವರಣೆಯನ್ನು ನಾನು ಸಭೆಯು ಮುಂದೆ ಇಡುವುದಕ್ಕೆ ತಯಾರು ಮಾಡಿ ಕೊಂಡಿದ್ದೇನೆ. You have got ample time to discuss about this. You have got ample material to say how many murders have taken place and why they have taken place, and you are free to place it before the House—we welcome it.

ಶ್ರೀ ಡಿ. ದೇವರಾಜ ಅರಸ್.—ಈಗ..........

ಶ್ರೀ ಆರ್. ಗುಂಡೂರಾವ್.—ನಿಮಗೆ ಏಕೆ ಅಷ್ಟು ಕಷ್ಟ? ಆದುದರಿಂದ you are free to speak about it, and you are free to criticise the Goverment. ನಿನ್ನೆ ನಡೆದ

ಚರ್ಚೆಯನ್ನು ನಾನು ಶಾಂತಿಯಿಂದ ಕುಳಿತು ಕೇಳುತ್ತಿದ್ದೇನೆ. ಮಾನ್ಯ ಜೆ. ಎಚ್. ಪಟೇಲರು ರಾಜ್ಯದಲ್ಲಿ ಏನೋ ಆಗಿದೆಯೆಂದು ಹೇಳಿದರು. ನಾನು ಬೇಕಾದರೆ ಸ್ಟ್ಯಾಟಿಸ್ಟಿಕ್ ಇಡುತ್ತೇನೆ. ಯಾವ ಯಾವ ರಾಜ್ಯದಲ್ಲಿ ಎಷ್ಟೆಷ್ಟು ಬಂದ್‌ಗಳು ನಡೆದಿವೆ, ಯಾರು ಯಾರು ಏನೇನು ಹೇಳಿಕೆಗಳನ್ನು ಕೊಟ್ಟಿದ್ದಾರೆ; ಪಾರ್ಲಿಮೆಂಟಿನಲ್ಲಿ ಏನೇನು ಹೇಳಿಕೆಯನ್ನು ಕೊಟ್ಟಿದ್ದಾರೆ ಎಂಬುದನ್ನೆಲ್ಲಾ ಇಡುತ್ತೇನೆ. ವಿಧಾನಸಭೆಯಲ್ಲಿ ಪೋಲೀಸ್ ಇಲಾಖೆ ಬಗ್ಗೆ ಮಾನ್ಯ ದೇವೇಗೌಡರು ಮಾತನಾಡಿದಾಗ ಅಂದಿನ ಮುಖ್ಯಮಂತ್ರಿಗಳು ಏನು ಉತ್ತರವನ್ನು ಕೊಟ್ಟಿದ್ದಾರೆ ಎಂಬುದನ್ನೆಲ್ಲಾ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹೇಳುತ್ತೇನೆ. ಈಗ ದೇಶದಲ್ಲಿ ಏನು ಆಗಿದೆ? ಕೃಷ್ಣನ ಕೊಲೆ ಆಗಿದೆ. ಪೋಲೀಸ್ ಅಧಿಕಾರಿಗಳು... ..

SRI D. DEVARAJ URS.—Every time, he goes on repeating—ನಿಮಗೆ ಏಕೆ ಅಷ್ಟು ಕಷ್ಟ ?

SRI R. GUNDU RAO.—When they said all those things, yesterday, you were not there.

ಶ್ರೀ ಡಿ. ದೇವರಾಜ ಅರಸ್.—ನಾವೇನು ಇಲ್ಲಿ ಕಡಲೇಪುರಿ ತಿನ್ನುವುದಕ್ಕೆ ಬಂದು ಕುಳಿತಿಲ್ಲ. ದೇಶದ ಆಗುಹೋಗುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದು ಕುಳಿತಿದ್ದೇವೆ, ರಾಜ್ಯದ ಕಷ್ಟ ಸುಖಗಳ ಬಗ್ಗೆ ಚರ್ಚೆ ಆಗಬೇಕಾಗಿದೆ.

SRI R. GUNDU RAO.—You were not here when they spoke.

SRI D. DEVARAJ URS.—Even though I was not here, I know what has happened.

SRI R. GUNDU RAO.—You can speak when your chance comes.

ಶ್ರೀ ಡಿ. ದೇವರಾಜ ಅರಸ್.—ಇಲ್ಲಿ ನಮ್ಮ ಮನೆಯ ಕಷ್ಟ ಸುಖ ಮಾತಾಡಲು ಬಂದಿಲ್ಲ. ದೇಶದ... ......

SRI R. GUNDU RAO.—It is my right to say.

SRI D. DEVARAJ URS.—That is not your right to say.

SRI R. GUNDU RAO. -It is your right to say all those things. I am not questioning your right. You were not here yesterday You don't know about all those things.

(*Inerruptions*)

SRI D. DEVARAJ URS.—I know how to conduct myself.

SRI R. GUNDU RAO.—This is not the way of conducting yourself...

SRI D. DEVARAJ URS.—I know how to conduct myself. What he says is highly objectionable.

MR. SPEAKER.—Have patience, I have to order that the Proceedings should not be recorded if this type of dialogue continues.

SRI R. GUNDU RAO.—When the Opposition Members were charging the Government, I kept quiet and I listened to them for nearly 3½ hours. ಅವರೂ ಸಹ ಸಮಾಧಾನದಿಂದ ಕೇಳಲಿ. ನನಗೇನೂ ಸಿಟ್ಟು ಬರುವುದಿಲ್ಲ. ನಿನ್ನೆಯ ದಿವಸ ಅವರು ಆರು ಗಂಟೆಗೆ ಸಭೆಗೆ ಬಂದರು. ನಿನ್ನೆ ನಡೆದ ಚರ್ಚೆಯನ್ನು ನಾವು ಸಮಾಧಾನದಿಂದ ಕೇಳಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.— ನಾವು ಅವರ ಕಷ್ಟವನ್ನು ಕೇಳುವುದಕ್ಕೆ ಬಂದಿಲ್ಲ. ಶಾಸಕರಾಗಿ ನಾವು ಇಲ್ಲಿ ಬಂದು ಕುಳಿತ್ತಿದ್ದೇವೆ.

ಶ್ರೀ ಆರ್. ಗುಂಡೂರಾವ್.— ಪ್ರಿಯವಾದ ಮಾತುಗಳನ್ನಾಡಿದರೆ ಅವರು ಕೇಳುತ್ತಾರೆ; ಅಪ್ರಿಯವಾದ್ದನ್ನು ಹೇಳಿದರೆ ಅವರಿಗೆ ಕೇಳುವುದಕ್ಕೆ ಕಷ್ಟವಾಗುತ್ತದೆ. I am here to justify the action taken by the Government and I am here to justify my colleague who has not at all interfered on any occasion in this matter ನನಗೆ ಏಕೆ ಈ ಬಗ್ಗೆ ಸಿಟ್ಟು. ಆದುದರಿಂದ ನಾನು ಹೇಳುತ್ತಿದ್ದೇನೆ, ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಗೆ ೬ ಗಂಟೆಗೆ ಬಂದರು. ನಿನ್ನೆ ನಡೆದ ಚರ್ಚೆಯನ್ನು ನಾನು ಕುಳಿತು ಕೇಳಿದ್ದೇನೆ. ನಾನು ಕೋಪ ಮಾಡಿಕೊಂಡಿಲ್ಲ, ಕೋಪ ಬಂದರೆ ತಡೆದುಕೊಳ್ಳಬೇಕು. ಇವತ್ತಿನ ದಿವಸ ಸುಮ್ಮನೆ ಹಸ್ತಕ್ಷೇಪ ಮಾಡಿದ್ದಾರೆಂದೂ, ಸಚಿವರು ರಾಜೀನಾಮೆ ಕೊಡಬೇಕು ಎನ್ನುವುದರಲ್ಲಿ ಯಾವ ಅರ್ಥವೂ ಸಹ ಇಲ್ಲ.

ಇನ್ನು ನಾನು ಬಂದ್ ವಿಚಾರ ಹೇಳುತ್ತಿದ್ದೆ, ಮಂಡ್ಯಾದಲ್ಲಿ ಬಂದ್ ನಡೆಯಿತು ಎಂದು ಹೇಳಿದರು. ಕೋಲಾರದಲ್ಲಿ... ಈ ದಿನ ಎಲ್ಲೆಲ್ಲೂ ಬಂದ್‌ಗಾಗಿ ಕರೆಯನ್ನು ನೀಡುತ್ತಿದ್ದಾರೆ. ಸಿನಿಮಾದಲ್ಲಿ ಟಿಕೆಟ್ ಸಿಗದಿದ್ದರೆ ಬಂದ್ ಆಚರಿಸುತ್ತಾರೆ ಹೋಟೆಲ್ ತಿಂಡಿ ಬೆಲೆ ಜಾಸ್ತಿಯಾದರೆ ಬಂದ್ ಆಚರಿಸುತ್ತಾರೆ, ಕೆ.ಎಸ್.ಆರ್.ಟಿ.ಸಿ. ಯವರು ಬಂದ್ ಆಚರಿಸುತ್ತಾರೆ ಕಾಲೇಜಿನಲ್ಲಿ ಸೀಟ್ ಸಿಕ್ಕದಿದ್ದರೆ ವಿದ್ಯಾರ್ಥಿಗಳು ಬಂದ್ ಆಚರಿಸುತ್ತಾರೆ. ಈಗ ಇಲ್ಲಿ ಒಂದು ಕೊಲೆ ನಡೆದಿದೆ. ಇದಕ್ಕೆ ಒಂದು ರಾಜಕೀಯ ಬಣ್ಣವನ್ನು ಹಚ್ಚುವುದಕ್ಕೆ ಹೋಗಬಾರದು, ಈ ರೀತಿ ಬಂದ್ ಮಾಡಿ ರಾಜಕೀಯ ಬಣ್ಣ ಹಚ್ಚಿದರೆ ನಿಜವಾದ ಅಪರಾಧಿಯನ್ನು ಪೋಲೀಸ್ ಹಿಡಿಯುವುದರಲ್ಲಿ ಕಷ್ಟವಾಗುತ್ತದೆ. ಅನೇಕ ಸಂದರ್ಭದಲ್ಲಿ ಈ ರೀತಿ ಆಗಿದೆ. ಸರ್ಕಾರದಲ್ಲಿ ಏನಾದರೂ ಚ್ಯುತಿಯಾಗಿದ್ದರೆ ಅದನ್ನು ಕೇಳುವ ಅಧಿಕಾರ ವಿರೋಧ ಪಕ್ಷದವರಿಗೆ ಇದೆ. ಕೇವಲ ಒಬ್ಬ ಮಂತ್ರಿಗಳ ತಮ್ಮ ಅಪರಾಧಿಯಾಗಿದ್ದಾನೆ, ಆದ್ದರಿಂದ ಆ ಮಂತ್ರಿ ರಾಜಿನಾಮೆ ಕೊಡಬೇಕು ಎಂದರೆ ಏಕೆ ಕೊಡಬೇಕು? ಸರ್ಕಾರದಲ್ಲಿ ಇವರೇನಾದರೂ ತಪ್ಪು ಮಾಡಿದ್ದಾರೆಯೆ ಇವರ ಮೇಲೆ ಯಾವುದಾದರೂ ಕಮಿಷನ್ನಿನ ಚಾರ್ಜಸ್ ಇದೆಯೆ? ಇವರ ಮೇಲೆ ಯಾವ ಕಮೀಷನ್‌ನಲ್ಲೂ ಚಾರ್ಜಸ್ ಇಲ್ಲ. ಇಂದು ಮಂತ್ರಿಯಾದವನು ತಾನು ಮಂತ್ರಿಯಾದಾಗ ಏನು ಪ್ರಮಾಣ ವಚನವನ್ನು ಸ್ವೀಕರಿಸಿದ್ದಾನೆ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಆತ ರಾಜಿನಾಮೆ ಕೊಡಬೇಕಾಗುತ್ತದೆ. ಇವತ್ತು ಒಬ್ಬ ಮಂತ್ರಿ ೮ ಸಾವಿರ ಬೆಲೆ ಬಾಳತಕ್ಕದ್ದನ್ನು ೮ ನೂರು ರೂಪಾಯಿಗೆ ಲೀಸ್‌ಗೆ ಕೊಟ್ಟಿದ್ದಾರೆ. ಇವತ್ತು ೧೦,೦೦೦ ಮೀಟರ್ ರಸ್ತೆ ಮಾಡುವ ಕಡೆ ೫,೦೦೦ ಮೀಟರ್ ರಸ್ತೆ ಮಾಡಿ ದುಡ್ಡನ್ನು ಲಪಟಾಯಿಸಿರುವ ಚಾರ್ಜಸ್ ಇದ್ದರೆ ರಾಜೀನಾಮೆ ಕೊಡಬೇಕು. ಈ ರೀತಿ ಚಾರ್ಜಸ್ ಮಾಡಿ ಕಮಿಷನ್ ಮುಂದೆ, ಕೋರ್ಟಿನ ಮುಂದೆ ಅಪರಾಧಿಯಾಗಿದ್ದರೆ ಒಂದು ಪಕ್ಷ ನೀವು ರಾಜಿನಾಮೆಯನ್ನು ಕೇಳಬಹುದಿತ್ತು, ಆ ತರಹ ಇಲ್ಲಿ ನಡೆದಿಲ್ಲ. ಸಂದರ್ಭ ಈ ರೀತಿ ಇರಬೇಕಾದರೆ ರಾಜಿನಾಮೆ ಏಕೆ ಕೊಡಬೇಕು? ಕೊಡದಿದ್ದರೆ ಏನು ಆಗುತ್ತದೆ? ಏನೂ ಆಗುವುದಿಲ್ಲ, ಈಗ ಕೋರ್ಟ್‌ನಲ್ಲಿ ಅಪರಾಧಿಗಳಿದ್ದಾರೆ. ಕೋರ್ಟಿನಲ್ಲಿ ನ್ಯಾಯಾಧೀಶರಿದ್ದಾರೆ, ಅವರು ಅವರನ್ನು ನಿರಪರಾಧಿಗಳೆಂದು ಬಿಟ್ಟು ಬಿಡಬಹುದು ಇಲ್ಲಾ ಅಪರಾಧಿಗಳೆಂದು ಗಲ್ಲಿಗೇರಿಸಬಹುದು. ಇದರಿಂದ ಸರ್ಕಾರಕ್ಕೆ ಏನೂ ಆಗಬೇಕಾಗಿಲ್ಲ. ಇದಕ್ಕೂ ಸರ್ಕಾರಕ್ಕೂ ಏನೂ ಸಂಬಂಧವಿಲ್ಲ, ಆಸಕ್ತಿ ಸಹ ಇಲ್ಲ. ಇಂತಹ ಒಂದು ಪರಿಸ್ಥಿತಿ ಇರುವಾಗ ಇವತ್ತಿನ ದಿವಸ ಸಚಿವ ಇಬ್ರಾಹಿಂ ಅವರು ರಾಜೀನಾಮೆ ಕೊಡಬೇಕು ಎನ್ನುವುದರಲ್ಲಿ ಅರ್ಥ ಇಲ್ಲ. ಯಾವುದೇ ಸಂದರ್ಭದಲ್ಲಿ ಶ್ರೀಮಾನ್ ಇಬ್ರಾಹಿಂ ಅವರು ಇದರಲ್ಲಿ ಹಸ್ತಕ್ಷೇಪ ಮಾಡಿಲ್ಲ. ಮತ್ತು ಈ ಪ್ರಕರಣಕ್ಕೂ ಸಚಿವ ಇಬ್ರಾಹಿಂ ಅವರಿಗೂ ಯಾವುದೇ ತರಹದ ಸಂಬಂಧವಿಲ್ಲ. ಈ ಬಗ್ಗೆ ಶ್ರೀಮಾನ್ ಜೆ. ಎಚ್. ಪಟೇಲ್ ಅವರು ಬಹಳವಾಗಿ ಹೇಳಿದರು, ಅದನ್ನು ನಾನು ಇಲ್ಲಿ ಹೇಳುವುದಿಲ್ಲ. ಅದನ್ನು ನಾನು ಮುಂದೆ ಹೇಳುತ್ತೇನೆ. ಇಲ್ಲಿ ಈ ವಿಷಯದ ಬಗ್ಗೆ ಅವರು ಮುಖ್ಯಮಂತ್ರಿಯವರೇ ರಾಜಿನಾಮೆಯನ್ನು ಕೊಡಬೇಕೆನ್ನುವ ಧಾಟಿಯಲ್ಲಿ ಅವರು ಹೇಳಿದರು. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟರೆ ಶ್ರೀಮಾನ್ ಜೆ. ಎಚ್. ಪಟೇಲರು ಮುಖ್ಯಮಂತ್ರಿಗಳಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವರು ಜನತಾ ಪಕ್ಷದಲ್ಲಿ ಇದ್ದರು. ಇನ್ನೇನು ಜನತಾ ಪಾರ್ಟಿ ಹೋಗುತ್ತದೆ ಎನ್ನುವ ಸಮಯದಲ್ಲಿ ಕಾಂಗ್ರೆಸ್ ಯು ಪಾರ್ಟಿಗೆ ಬಂದರು. ಮಂತ್ರಿ ಮಂಡಲ ವಿಸ್ತರಣೆ ಆಯಿತು, ಇವರಿಗೆ ಮಂತ್ರಿ ಪದವಿ ಸಿಗಲಿಲ್ಲ. ಅನಂತರ ಆ ಸರ್ಕಾರವೂ ಸಹಾ ಬಿದ್ದು ಹೋಯಿತು. ಆದು ಬಿದ್ದು ಹೋಗುವ ಸರ್ಕಾರ.

ಶ್ರೀ ಜೆ. ಎಚ್. ಪಟೇಲ್.—ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ೨-೩ ಬಾರಿ ಪ್ರಸ್ತಾಪ ಮಾಡಿದ್ದಾರೆ, ನಾನು ಮಂತ್ರಿಯಾಗುವುದಕ್ಕೋಸ್ಕರ ಜನತಾ ಪಾರ್ಟಿ ಬಿಟ್ಟು ಕಾಂಗ್ರೆಸ್ 'ಯು' ಪಾರ್ಟಿಗೆ ಬಂದೆನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ನಾನೇನೂ ಜನತಾ ಪಾರ್ಟಿಯನ್ನು ಬಿಟ್ಟವನು ಅಲ್ಲ, ಜನತಾ ಪಾರ್ಟಿಯವರೇ ನನ್ನನ್ನು ಹೊರ ಹಾಕಿದರು. ನಾನು ಶ್ರೀಮಾನ್ ದೇವರಾಜ್ ಅರಸ್ ಅವರನ್ನು ಸೇರಿದ್ದು ನಾನು ಮಂತ್ರಿಯಾಗಬೇಕೆಂದಲ್ಲ. ಶ್ರೀಮಾನ್ ದೇವರಾಜ್ ಅರಸ್ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗಿನಿಂದಲೂ ನಾನು ಶ್ರೀಮತಿ ಇಂದಿರಾಗಾಂಧಿಯವರ ಗುಲಾಮಗಿರಿಗೆ ವಿರೋಧ ಎಂದು ಹೇಳಿಕೊಂಡು ಬಂದಿದ್ದೇನೆ. ನಾನು ಕೇವಲ ಮಂತ್ರಿ ಪದವಿಗೆ ಆಸೆಪಟ್ಟವನಲ್ಲ.

೩-೩೦ ಪಿ. ಎಂ.

ಶ್ರೀಮತಿ ಇಂದಿರಾ ಗಾಂಧಿ ಕೃಪಾಪೋಷಿತ ನಾಟಕ ಮಂಡಲಿ ತಾವು ಇದ್ದಿರಲ್ಲ ತಮಗೆ ಗೊತ್ತು ಯಾವ ರೀತಿ ಮಂತ್ರಿಯಾಗಬೇಕು ಎಂಬುದು, ಆದರೆ ನನಗೆ ಗೊತ್ತಿಲ್ಲ ಅದು. ಶ್ರೀಮಾನ್ ದೇವರಾಜ ಅರಸ್‌ರವರು ಇಂದಿರಾ ಗಾಂಧಿಯವರ ವಿರುದ್ಧ ನಿಂತರು. ಮತ್ತು ಅವರು ಕೆಲವೊಂದು ಸಮಾಜವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಜಾರಿಗೆ ತಂದರೂ ಎಂದು ಅವರ ಪಕ್ಷಕ್ಕೆ ಸೇರಿದನೇ ಹೊರತು ನಾನು ಮಂತ್ರಿಯಾಗಬೇಕೆಂದು ಸೇರಿಕೊಳ್ಳಲಿಲ್ಲ. ನನಗೆ ಆ ಆಶೆಯೂ ಇಲ್ಲ. ಆ ರೀತಿ ಮಂತ್ರಿಯಾಗ ಬೇಕೆಂದು ಆಶೆ ಇದ್ದಿದ್ದರೆ ನಾನು ಹಿಂದೆಯೇ ಸೇರಬಹುದಾಗಿತ್ತು. ದಯವಿಟ್ಟು ಆ ರೀತಿ ನೀವೇನಾದರೂ ಮನಸ್ಸಿನಲ್ಲಿ ತಿಳಿದುಕೊಂಡಿದ್ದರೆ ಅದು ತಪ್ಪು ಭಾವನೆ. ನಾನು ಮಂತ್ರಿಯಾಗಬೇಕಾದರೆ ನನಗೆ ಯಾವ ಕೃಪೆಯೂ ಬೇಕಾಗಿಲ್ಲ. ನನ್ನ ಸ್ವಂತ ಶಕ್ತಿಯಿಂದ ಆಗುತ್ತೇನೆಂದು ಹೇಳುತ್ತೇನೆ.

ಶ್ರೀ ಆರ್. ಗುಂಡುರಾವ್.— ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿದರೆ ದೇಶಕ್ಕೆ ಗೊತ್ತಾಗುವುದಿಲ್ಲ ಎಂದ ಹಾಗೆ ತಾವು ಹೇಳುವ ಮಾತಾಗಿರುತ್ತದೆ. ಮಾನ್ಯ ಜೆ. ಎಚ್. ಪಟೇಲರು ತಮ್ಮನ್ನು ಜನತಾಪಕ್ಷದವರೇ ಹೊರಗೆ ಹಾಕಿದರು ಎಂದು ಹೇಳಿದರು. ಹೇಗಾದರೂ ಮಾಡಿ ಪಕ್ಷದಿಂದ ಹೊರಗೆ ಬರಬೇಕಲ್ಲ, ಅದಕ್ಕೆ ಇಲ್ಲದ ಸಲ್ಲದ ಕಾರಣಗಳನ್ನು ಹೇಳತಕ್ಕಂಥಾದ್ದು ವಾಡಿಕೆ. ಪಕ್ಷ ಮುಳುಗಲಿ ತೇಲಲಿ ಒಂದೇ ಪಕ್ಷದಲ್ಲಿ ಇರಬೇಕಾಗಿತ್ತು. ಹಡಗು ಮುಳುಗುತ್ತಾ ಇರತಕ್ಕಂಥ ಸ್ಥಿತಿಯಲ್ಲಿದ್ದಾಗ, ಇದರಲ್ಲಿದ್ದರೆ ಇನ್ನು ಡೇಂಜರ್ ಎಂದು ಹೊರಗೆ ಬರಬೇಕಾದರೆ ಕ್ಯಾಪ್ಟನ್ ಪರ್ಮಿಷನ್ ಕೊಡಬೇಕಲ್ಲ, ಅದಕ್ಕೆ ಏನು ಮಾಡುವುದು ಎಂದು ಹೇಳಿ ಇಲ್ಲದ ಸಲ್ಲದ ಆರೋಪಗಳನ್ನು ಜನತಾ ಪಕ್ಷದ ಮೇಲೆ ಹೋರಿಸಿ ಹೊರಗೆ ಬಂದು ಕಾಂಗ್ರೆಸ್ ಯು ಪಕ್ಷವನ್ನು ಸೇರಿಕೊಂಡಿರಿ. ಇರಲಿ ರಾಜ್ಯದಲ್ಲಿ ಒಂದು ಸತ್ ಸಂಪ್ರದಾಯವನ್ನು ಸ್ಥಾಪನೆ ಮಾಡಬೇಕು. ಈ ಪಕ್ಷಕ್ಕೆ ಬರಬೇಕಾದರೆ ನಿಮ್ಮ ಪ್ಲಾನ್ ಬೇರೆ ಇತ್ತು. ಮಂತ್ರಿ ಪದವಿ ಸಿಗಲಿಲ್ಲವಾದರೂ ಛೇರ್‌ಮನ್ ಪದವಿಯಾದರೂ ಕೊಟ್ಟರಲ್ಲ, ಆದರೆ ಅವರು ಹೇಳುತ್ತಾರೆ ನಾನು ಮೆರಿಟ್ ಮೇಲೆ ಬರುತ್ತೇನೆಂದು.

ಶ್ರೀ ಜೆ. ಎಚ್. ಪಟೇಲ್.— ನಿಮ್ಮ ಸ್ಕೂಲ್ ಆಫ್ ಥಾಟ್ ಬೇರೆ ನಮ್ಮ ಸ್ಕೂಲ್ ಆಫ್ ಥಾಟ್ ಬೇರೆ. ಶ್ರೀಮತಿ ಇಂದಿರಾ ಗಾಂಧಿಯವರ ಕಾಲು ಹಿಡಿದು ಗುಲಾಮಗಾರರಾಗಿ ಬಂದಿರಿ ಎಂದು ಹೇಳೋಣವೇ?

ಶ್ರೀ ಆರ್. ಗೂಂಡೂರಾವ್.— ನೀವು ಶ್ರೀಮತಿ ಇಂದಿರಾ ಗಾಂಧಿಯವರ ಕಾಲು ಹಿಡಿದು ಕೈ ಹಿಡಿದು ಎಂದು ಹೇಳಿದರೆ ನಾವು ಕೂಡ ತಮ್ಮನ್ನು ಶ್ರೀ ದೇವರಾಜ ಅರಸ್‌ರವರ ಕಾಲು ಹಿಡಿದು ಕೈ ಹಿಡಿದುಕೊಂಡು ಹೋದಿರಿ ಎಂದು ಹೇಳಬೇಕಾಗುತ್ತದೆ.

(*Interruptions*)

MR. SPEAKER.— Don't record. **

** ಅಧ್ಯಕ್ಷರ ಅಪ್ಪಣೆ ಮೇರೆಗೆ ಮುಂದೆ ನಡೆದಂಥ ಎರಡೂ ಕಡೆಯ ವಾಗ್ವಾದವನ್ನು ದಾಖಲೆ ಮಾಡಿಲ್ಲ.

ಶ್ರೀ ಎಚ್. ಡಿ ದೇವೇಗೌಡ.— ತಾವು ಆ ಸ್ಥಾನದಲ್ಲಿರತಕ್ಕಂಥ ಕಾಲದಲ್ಲಿ ಈ ಸದನದಲ್ಲಿ ಏನು ಕಾರ್ಯ ಕಲಾಪಗಳು ನಡೆಯುತ್ತಿವೆ, ಅದನ್ನು ರೆಕಾರ್ಡ್ ಮಾಡಬಾರದು ಎಂದು ಹೇಳತಕ್ಕಂಥ ಪರಿಸ್ಥಿತಿ ಬರಬೇಕಾದರೆ, ಸಭೆಯ ಗೌರವಕ್ಕೆ ಘನತೆಗೆ ಕುಂದು ಬರತಕ್ಕಂಥ ಮಾತುಗಳನ್ನಾಡುತ್ತಿದ್ದರೆ, ಆ ರೀತಿ ನಡೆದುಕೊಳ್ಳಬಾರದು ಎಂದು ಹೇಳಬೇಕು. ತಾವು ಸಭೆಯನ್ನು ರೆಗ್ಯುಲೇಟ್ ಮಾಡಬೇಕೇ ವಿನಃ ಸಭೆಯ ಕಾರ್ಯಕಲಾಪಗಳನ್ನು ರೇಕಾರ್ಡ್ ಮಾಡಬೇಡಿ ಎಂದು ಹೇಳತಕ್ಕಂಥಾದ್ದು ತಾವು ಅಧಿಕಾರದ ಎಲ್ಲೆ ಮೀರಿ ಹೋಗುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ.

MR. SPEAKER.— What are you speaking now, is being recorded. But, at the same time, I have to control the House.

ಶ್ರೀ ಆರ್, ಗುಂಡೂರಾವ್.— ಆದ್ದರಿಂದ ಅವರು ಹೇಳಿದ ಹಾಗೆಯೇ ಅವರ ಸ್ಕೂಲ್ ಆಫ್ ಥಾಟ್ ಬೇರೆ ನಮ್ಮ ಸ್ಕೂಲ್ ಆಫ್ ಥಾಟ್ ಬೇರೆ, ಆದರೆಇನ್ನೊಬ್ಬರ ಮೇಲೆ ಹೇಳಬೇಕಾದರೆ, ... ಶ್ರೀಮತಿ ಇಂದಿರಾ ಗಾಂಧಿಯವರ ಮೇಲೆ, ಅವರ ಪಕ್ಷದ ಒಗ್ಗೆ ಎಷ್ಟೋ ಭಾಷಣ ಮಾಡಿದರು...

ಶ್ರೀ ಜೆ. ಎಚ್. ಪಟೇಲ್.— ಇಂದಿರಾ ಗಾಂಧಿಯವರ ವಿರುದ್ಧವಾಗಿ ಮೊದಲಿನಿಂದಲೂ ನಾವು ಹೇಳುತ್ತಲೇ ಇದ್ದೇವೆ.

ಶ್ರೀ ಆರ್. ಗುಂಡೂರಾವ್:— ಅಧ್ಯಕ್ಷರೆ ನಾವು ಆಳುವ ಪಕ್ಷದಲಿದ್ದುಕೊಂಡು- ಮುಖ್ಯಮಂತ್ರಿಯಾಗಿದ್ದುಕೊಂಡು ನೀವು ಹೇಳಿದ್ದೆಲ್ಲ ಸರಿ. ಎಂದು ನೀವು ಟೀಕೆ ಮಾಡುತ್ತಿದ್ದರೆ ನಾವು ಕೇಳಿಕೊಂಡು ಕುಳಿತಿರುವುದಕ್ಕೆ ತಯಾರಾಗಿಲ್ಲ. ನಿಮಗೆ ಫ್ರೀಡಮ್ ಇರುತ್ತದೆ, ನೀವು ಈ ಪಕ್ಷದಲ್ಲಿಯೇ ಇರಿ ಅಥವಾ ಇನ್ನೊಂದು ಪಕ್ಷಕ್ಕೆ ಹೋಗಿ ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಇನ್ನೊಬ್ಬರನ್ನು ನೀವು ಕೈಕಾಲು ಹಿಡಿದುಕೊಂಡು ಹೋಗುತ್ತೀರಿ, ಗುಲಾಮರಾಗಿದ್ದೀರಿ ಎಂದೆಲ್ಲಾ ಟೀಕೆ ಮಾಡತಕ್ಕಂಥಾದ್ದು ಸರಿಯಲ್ಲ. ತಮಗೆ ಹೇಳುತ್ತಾ ಇದ್ದೇನೆ ಈ ದೇಶದಲ್ಲಿ ರಾಜ್ಯವನ್ನು ಆಳುತ್ತಿರಬೇಕಾದರೆ ಒಂದಲ್ಲ ಒಂದು ರೀತಿಯಲ್ಲಿ ಗುಲಾಮರಾಗಿಯೇ ರಾಜ್ಯಭಾರವನ್ನು ಮಾಡಿದಂಥ ಇತಿಹಾಸವಿರುತ್ತದೆ. ಆದ್ದರಿಂದ ಯಾರಾದರೂ ಬಂದ್‌ಗೆ ಕರೆ ಕೊಟ್ಟರೆ ಬಂದ್ ಆಗುತ್ತದೆ, ಅಂದರೆ ಸಾರ್ವಜನಿಕರ ಅಭಿಪ್ರಾಯಕ್ಕೆ ತೀರ್ಮಾನ ಕೊಡುವುದಾದರೆ ಚುನಾವಣೆಗಳಾದರೂ ಏತಕ್ಕೆ ಎಂದು ಕೇಳುತ್ತೇನೆ. ಶ್ರೀಮಾನ್ ಶ್ರೀನಿವಾಸ್ ಹೇಳಿದರು ಸಿಂಹಾಸನವೇ ಅಲುಗಾಡಿಹೋಗುತ್ತದೆಂದು, ಅದಕ್ಕೆ ಹೇಳುತ್ತೇನೆ ಪರಿಷತ್ ರಾಜ ಸರ್ಪಕ್ಕೆ ಹೆದರಿಕೊಂಡು ಯಜ್ಞಮಾಡಿದರೂ ಕೊನೆಗೂ ಬಿಡಲಿಲ್ಲ ಸರ್ಪ ನಿಂಬೆ ಹಣ್ಣಿನಿಂದ ಬಂದು ಪರಿಷತ್ ರಾಜನನ್ನು ಕಚ್ಚಿತು. ಶ್ರೀಮಾನ್ ಜೆ. ಎಚ್. ಪಟೇಲರು ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆ ಹೇಳಿದರು, ಇಂದಿರಾಗಾಂಧಿ ಅಲ್ಲ ಇನ್‌ದಿರಾ ಎಂದು ಅದಕ್ಕೆ ಒಂದು ಅಮೆಂಡ್ ಮಾಡುತ್ತಾ ದೃಷ್ಟಿಯೆಲ್ಲ ಒಂದೇ, ಹೋಗುವ ಮಾರ್ಗವೆಲ್ಲ ಒಂದೇ, ಎಂದು ಹೇಳಿದರು. ಇದು ಏನು ಸಂಬಂಧ ಇದೆ, ಇನ್ನು ಮಾನ್ಯ ದೇವೇಗೌಡರು ಹಾಗೂ ಮಾನ್ಯ ಬೊಮ್ಮಾಯಿಯವರು ಜನತಾ ಪಾರ್ಟಿ ಸಿಂಬಲ್‌ದಿಂದ ಬಂದವರು. ಅವರ ನಾಯಕರು ಎಲ್ಲೇ ಇರಲಿ ಅಥವಾ ಇಲ್ಲದೇ ಇರಲಿ ಅವರು ಇದ್ದ ಕಡೆ ಇದ್ದಾರೆ ಅದನ್ನು ಮೆಚ್ಚಬೇಕು. ಆದರೆ ಕೆಲವರು ಗೆಲ್ಲುವುದಕ್ಕೆ ಒಂದು ಸಿಂಬಲ್, ಆಮೇಲೆ ಸೇರುವುದು ಇನ್ನೊಂದು ಸಿಂಬಲ್‌ನವರ ಜೊತೆ.

ಶ್ರೀ ಮೈಕೆಲ್ ಫರ್ನಾಂಡಿಸ್.— ನಿಮ್ಮ ಜೊತೆಯಲ್ಲಿ ಯಾರು ಕೂತಿದ್ದಾರೆ ಅವರೂ ಕೂಡ ಗೆದ್ದಿದ್ದು ಒಂದು, ಇರುವುದು ಬೇರೊಂದು ಅಲ್ಲವೇ ?

ಅಧ್ಯಕ್ಷರು.— ಅದು ಈಗ ಬೇಡ. ಬಂದಿರುವ ಪ್ರಶ್ನೆ ಬಗ್ಗೆ ಹೋಗೋಣ.

ಶ್ರೀ ಜೆ. ಎಚ್. ಪಟೇಲ್.— ಮಾನ್ಯ ಗುಂಡೂರಾವ್‌ರವರು ಛತ್ರಿ ಹಿಡಿದಿದ್ದಾರೆ,

ಶ್ರೀ ಆರ್. ಗುಂಡೂರಾವ್.— ಈಗ ತಮ್ಮದು ಯಾವುದು. ಛತ್ರಿಯೇ, ಕೊಡೆಯೇ ಅಥವಾ ಹೆಂಗಸೇ ಯಾವುದು ತಮ್ಮದು ? ಈಗ ನಮಗೆ ಚಾನ್ಸ್ ಬಂದಿದೆ ಹೇಳುತ್ತಿದ್ದೇವೆ ನೀವು ಕೇಳಿ ? ನಿಮಗೆ ಛತ್ರಿ ಬಂದಾಗ ನೀವು ಏನು ಹೇಳುತ್ತಿದ್ದಿರಿ ಅದನ್ನು ನಾವು ಕೇಳಿದ್ದೇವೆ. ಆದುದರಿಂದ ಅಧ್ಯಕ್ಷರೇ ಈಗ ಕೊನೆಯದಾಗಿ ಹೇಳುವುದಾದರೂ ಏನೆಂದರೆ ಇದರಲ್ಲಿ ಯಾವುದೇ ಹಸ್ತಕ್ಷೇಪ ನಡೆದಿಲ್ಲ. ಸಿಓಡಿ ಯವರು ಚಾರ್ಜ್‌ಷೀಟ್ ಹಾಕಿದ್ದಾರೆ, ಇನ್ನು ಕೇಸು ಬಗ್ಗೆ ಏನು ಮಾತನಾಡುವುದು ಇಲ್ಲ. ಇದು ಸಾರ್ವಜನಿಕರ

ಗಮನ ಸೆಳೆಯುವಂತಾದ್ದು ಏನೂ ಇಲ್ಲ. ಮಾನ್ಯ ಇಬ್ರಾಹಿಂ ರವರು ಯಾವ ರೀತಿಯಿಂದಲೂ ಹಸ್ತಕ್ಷೇಪ ಮಾಡಿಲ್ಲ ಅದಕ್ಕಾಗಿ ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶಕೊಡಬಾರದು ಎಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ನಾನು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ್ದವನು. ನಾನು ಏನು ಭಾಷಣ ಮಾಡಿದ್ದೆ ಅದನ್ನು ಬಹಳ ಗಾಂಭೀರ್ಯದಿಂದ ಕೇಳಿದ್ದಾರೆ, ನಾನು ಕೂಡ ಅವರ ಭಾಷಣವನ್ನು ಬಹಳ ಗಾಂಭೀರ್ಯದಿಂದ ಕೇಳಿದ್ದೇನೆ. ಅವರು ಏನು ಹೇಳಿದ್ದಾರೆ ಅದನ್ನು ನೋಡಿದರೆ ನನಗೆ ಇರತಕ್ಕಂಥ ಅಲ್ಪ ಅನುಭವದಲ್ಲಿ ಮತ್ತು ವಿರೋಧಪಕ್ಷದಲ್ಲಿ ಕೂತು ಕೆಲಸ ಮಾಡತಕ್ಕಂಥ ಸದಸ್ಯರು ಏನು ಪತ್ರಿಕೆಯಲ್ಲಿ ಬರತಕ್ಕಂಥ ವಿಚಾರವಲ್ಲಿ ಈ ಸಭೆಗೆ ಬಹುಶಃ ಚರ್ಚೆಗೆ ತೆಗೆದುಕೊಳ್ಳುವಂತಹುದರ ಬಗ್ಗೆ ನಾನು ನಿನ್ನೆ ಸಂಪೂರ್ಣವಾಗಿ ಭಾಷಣ ಮಾಡಿದಾಗ ಪತ್ರಿಕೆಗಳಲ್ಲಿ ಬಂದಿರತಕ್ಕಂಥ ವರದಿಗಳ ಆಧಾರದ ಮೇಲೆ ನನ್ನ ಚರ್ಚೆಯನ್ನು ಸೀಮಿತಗೊಳಿಸಿದ್ದೇನೆ. ಇನ್ನು ಹಲವಾರು ಕಮಿಷನ್‌ಗಳ ಬಗ್ಗೆ ಅಂದರೆ ಶಹಾ ಕಮಿಷನ್. ರೆಡ್ಡಿ ಕಮಿಷನ್ ಹೀಗೆ ಅನೇಕ ಕಮಿಷನ್‌ಗಳ ಬಗ್ಗೆ ನಾನು ಜನತಾ ಪಕ್ಷದಲ್ಲಿ ಮತ್ತು ವಿರೋಧಪಕ್ಷದಲ್ಲಿ ಒಂದೊಂದಾಗಿ ಹೇಳುವುದಕ್ಕೆ ತಯಾರಿದ್ದೇನೆ. ಇನ್ನು ಏನೇನು ನಡೆದಿದೆ ಕಾಮಗಾರಿಯಲ್ಲಿ ಎಷ್ಟು ದುಡ್ಡು ಮರ್ಚೆಂಟ್‌ಗಳಿಂದ ಬಂದಿದೆ ಇದೆಲ್ಲಾ ಈಗ ಹೇಳುವುದಕ್ಕೆ ಹೋಗುವುದು ಬೇಡ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ನಿನ್ನೆಯಿಂದ ನಡೆದ ಭಾಷಣಕ್ಕೆ ಉತ್ತರ ಕೊಟ್ಟರೋ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಏನು ಈ ಒಂದು ಪ್ರಕರಣ ಇದೆ ಅದು ೨೬-೩ ರಂದು ನಡೆದದ್ದು ಎಂದು ಹೇಳಿದ್ದೇನೆ ಅದನ್ನು ಅವರು ತಿದ್ದಿದ್ದಾರೆ. ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ನಿನ್ನೆ ಹೇಳಿದ ಘಟನೆಗೆ ಏನು ಉತ್ತರ ಕೊಟ್ಟಿದ್ದಾರೆ ಅದು ಅವರು ಅಧಿಕಾರದ ಸಾಮರ್ಥ್ಯ ತೋರಿಸತಕ್ಕಂಥದ್ದು. ಆದರೆ ಅವರು ಏನು ಹೇಳಿದ್ದಾರೆ ಮತ್ತು ನಾನು ಏನು ಹೇಳಿದ್ದೇನೆ ಇಬ್ಬರೂ ಕುಳಿತು ಕೇಳಿದ್ದೇವೆ ಆದರೆ ಪತ್ರಿಕೆಗಳ ವರದಿ ಆಧಾರದ ಮೇಲೆ ಬಿಡಿಸಿ ಬಿಡಿಸಿ ಹೇಳಿದ್ದೇನೆ ಅದರ ಬಗ್ಗೆ ವಿಚಾರಣೆ ಆಗಬೇಕು ಎಂದು ಹೇಳಿದ್ದೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅದು ಯಾವುದಕ್ಕೂ ಯಾವ ವಿಷಯವನ್ನು ಹೇಳಲಿಲ್ಲ. ಇನ್ನು ವಾಣಿ ಬಸ್ಸಿನಲ್ಲಿ ಬಂದರು ಎಂದು ಹೇಳಿರುವುದಕ್ಕೆ ಅದಕ್ಕೆ ಯಾವುದೂ ಹೇಳಲಿಲ್ಲ. ಇನ್ನು ೩೦-೪ರಲ್ಲಿ ಹೇಳಿದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಕೇಳುತ್ತೇನೆ. ೧೮ನೇ ತಾರೀಖು ಮೊದಲನೆ ಸ್ಟೇಟ್‌ಮೆಂಟ್ ಮಾಡಿದರು. ರಾಜು ಎಂಬುವರು ೧೮ನೇ ತಾರೀಖು ಕಂಪ್ಲೈಂಟ್ ಕೊಟ್ಟರು, ರವೀಂದ್ರ ಎಂಬುವವರು ೧೮ನೇ ತಾರೀಖು ಎಂದು ಹೇಳಿದ ಹಾಗೆ ಮಾನ್ಯ ಖಾದರ ರವರು ೫ನೇ ತಾರೀಖು ಎಲ್ಲಿದ್ದರು. ಭದ್ರಾವತಿಯಲ್ಲಿ ಇದ್ದರೇ? ಇರಲಿಲ್ಲವೇ ಎನ್ನುವುದನ್ನು ಸಮರ್ಥನೆ ಮಾಡಿ. ನೀವು ಹೇಳುವಂತಾದ್ದು ಅದೇ ವೇದ ವಾಕ್ಯವೇ? ೧೮ನೇ ತಾರೀಖು ಪೋಲೀಸ್ ಠಾಣೆಯಲ್ಲಿ ರವೀಂದ್ರ ಎನ್ನುವವರು ಕಂಪ್ಲೆಂಟ್ ಕೊಟ್ಟಾಗ ಭದ್ರಾವತಿಯಲ್ಲಿ ಖಾದರ್‌ರವರು ಇದ್ದರೆ ? ಇದ್ದರೆ ಏತಕ್ಕೆ ಅವರನ್ನು ಅರೆಸ್ಟ ಮಾಡಲಿಲ್ಲ? ಇವರು ವಾಣಿ ಬಸ್ಸಿನಲ್ಲಿ ಬಂದರೆ ? ಬಂದಿದ್ದರೆ ಆ ಬಸ್ಸಿನಲ್ಲಿ ಸುಮಾರು ೬೦ ಜನರು ಪ್ರಯಾಣ ಮಾಡಿರುತ್ತಾರೆ. ಇವರು ಬರಲಿಲ್ಲವೆಂದು ಹೇಳುವುದಕ್ಕೆ ಸಾಧ್ಯವೇ ? ಇದಕ್ಕೆ ಯಾರು ಸಾಕ್ಷಿ ಇದ್ದಾರೆಯೋ? ಇದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದನ್ನು ನಾವು ನಂಬವೆ ಗತ್ಯಂತರವೇ ಇಲ್ಲ. ಆದ್ದರಿಂದ ಬಸ್ಸಿನಲ್ಲಿ ಬುರ್ಕಾ ಹಾಕಿಕೊಂಡು ಬರಲಿಲ್ಲ ಇದು ಹೇಗೆ ತಿಳಿಯುವುದು ? ಸ್ವಾಮಿ ಇವರು ಎಲ್ಲಿದ್ದರು? ಚೆನ್ನಗಿರಿಗೆ ಹೋದರು ಬಂದರು ಎಂದು ಹೇಳಿದರೆ ಹೇಗೆ ? ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಹದ್ಯೋಗಿಗಳನ್ನು ಬಿಟ್ಟುಕೊಡಬೇಕೆಂದು ನಾನು ಹೇಳುತ್ತಿಲ್ಲ. ನಾನು ನಿನ್ನೆ ಹೇಳಿದ್ದನ್ನೆಲ್ಲಾ ಕೇಳಿದವರು ನಮಗೆ ಏನು ಸಂಶಯ ಇದೆ ಅದಕ್ಕೆ ತಾವು ಪರಿಹಾರ ದೊರಕಿಸಲಿಲ್ಲ. ನನ್ನದು ವಾದ ಮಾನ್ಯ ಇಬ್ರಾಹಿಂ ರಾಜೀನಾಮೆ ಕೊಡಿಸಿ ಎನ್ನುವುದಲ್ಲ. ಆದರೆ ಅವರು ಏನು ಒಂದು ಸಂಶಯದ ಸುಳಿಯಲ್ಲಿ ಸಿಕ್ಕಿದ್ದಾರೆ. ಅದಕ್ಕೆ ತಮ್ಮ ಉತ್ತರ ಏನು ಹೇಳುತ್ತೀರಿ ? ಇನ್ನು ೨೯ನೇ ತಾರೀಖು ತಮಿಳುನಾಡಿನಿಂದ ಬಂದಾಗ ತಾವು ಏನು ಹೇಳಿದ್ದೀರಿ? ಯಾವ ಯಾವ ವಿಷಯಗಳ ಮೇಲೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದು ತಮ್ಮ ವರದಿ ಮೇಲೆ ಏನು ಹೇಳಿದ್ದೀರಿ ಅದನ್ನು ನಾನು ಒಪ್ಪುತ್ತೇನೆ.

ನಾನು ತಿಳಿಸಿದಂಥ ವಿಷಯಗಳ ಬಗ್ಗೆ, ತಾವು ವಿಚಾರಣೆ ನಡೆಸಿದ್ದೇವೆ, ತಾವು ಹೇಳಿರುವುದು ಸತ್ಯವಲ್ಲ, ಎಂದು ಹೇಳಲಿಲ್ಲ. ತಾವು ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎಂದು ನನ್ನ ಅನಿಸಿಕೆ. ಇಂಥ ಗಹನವಾದ ವಿಚಾರಗಳು ಬಂದಾಗ ನಾವು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ.

ಬೇಜವಾಬ್ದಾರಿಯಿಂದ ಮಾತನಾಡತಕ್ಕ ಅಭ್ಯಾಸವನ್ನು ನಾನು ಬೆಳೆಸಿಕೊಳ್ಳಲಿಲ್ಲ, ಆದರೆ ತಾವು ಉತ್ತರ ಕೊಡುವಾಗ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡಂತೆ ಕಾಣಲಿಲ್ಲ ಎನ್ನುವ ರೀತಿಯಲ್ಲಿ ನನಗೆ ತೋರುತ್ತದೆ. ನಾನು ಹೇಳಿದಂಥ ಯಾವುದೇ ಘಟನೆಯ ಬಗ್ಗೆಯೂ ತಾವು ಉತ್ತರ ಕೊಡಲಿಲ್ಲ ಎಂದು ಹೇಳಿ ನನ್ನ ಮಾತುಗಳನು ಮುಗಿಸುತ್ತೇನೆ. Have you registered a case against that officer ?

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮಾನ್ ದೇವೇಗೌಡರು ಹೇಳಿದಂಥ ವಿಷಯಗಳ ಬಗೆ ನಾನು ಇನ್ನೂ ಎರಡು ಮಾತುಗಳನ್ನು ಹೆಚ್ಚಾಗಿ ಹೇಳುತ್ತೇನೆ. ನಾವು ಇಲ್ಲಿ ಕೊಲೆಯ ವಿಚಾರವನ್ನು ಚರ್ಚೆ ಮಾಡಬೇಕಾಗಿಲ್ಲ, ನಾವು ವಿಚಾರ ಮಾಡಬೇಕಾಗಿರುವುದು ಮಂತ್ರಿಗಳ ಹಸ್ತಕ್ಷೇಪ ಇದರಲ್ಲಿ ಇದೆಯೋ ಇಲ್ಲವೋ ಎನ್ನುವುದು ಮಾತ್ರ. There are circumstances which categori a ly point out against Sri Ibrahim is an accused. If tnose instances are taken cumulativ.ly, the evidence points out that he has committed certain serious offences under the Penal Code. ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ಆಧರಿಸಿ ನಾವು ಇಲ್ಲಿ ಹೇಳಿದ್ದೇವೆ ಆದರೆ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಶ್ರೀ ವಿಕ್ಟರ್ ಈ ಬಗ್ಗೆ ಏನು ವರದಿ ಕೊಟ್ಟಿದ್ದಾರೆ ಅದನ್ನು ಮರೆಮಾಚುವುದು ಬೇಡ. ತಾವು ಬರೀ ಪೋಲೀಸ್ ಸ್ಟೇಟ್‌ಮೆಂಟನ್ನು ಇಲ್ಲಿ ಓದಿದ್ದೀರಿ. ಮಾನ್ಯ ವಿಕ್ಟರ್ ಅವರ ವರದಿಯನ್ನು ಇಲ್ಲಿ ಹೇಳಲಿಲ್ಲ. ಅವರು ಕೊಟ್ಟಂತ ವರದಿಯನ್ನು ಸಭೆಯ ಮುಂದೆ ಇಡುತ್ತೀರಾ ? ಆಮೇಲೆ ಪೋಲೀಸ್ ಜೀಪಿನಲ್ಲಿ ಆರೋಪಿಯನ್ನು ಕರೆದುಕೊಂಡು ಬಂದು ವಾಣಿ ಬಸ್ಸಿನಲ್ಲಿ ಬೆಂಗಳೂರಿಗೆ ಕಳುಹಿಸಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಇದನ್ನು ಕಂಡಂಥ ಪ್ರತ್ಯಕ್ಷ ದರ್ಶಿಗಳನ್ನು ವಿಚಾರಣೆ ಮಾಡಲಿಕ್ಕೆ ನಮಗೆ ಯಾವ ಕೋರಂ ಇದೆ ? ನೀವು ಸಂಬಂಧಪಟ್ಟ ಅಧಿಕಾರಿಯ ಮೇಲೆ ಕೇಸನ್ನು ರಿಜಿಸ್ಟರ್ ಮಾಡಿದ್ದೀರಾ ? ಇದರ ಬಗ್ಗೆ ಅನೇಕ ಪುರಾವೆಗಳು ದಾಖಲಾಗಿವೆ. ಅಲ್ಲಿ ಜನರು ನಮಗೂ ಅರ್ಜಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಕಳುಹಿಸಿದ್ದಾರೆ, ಇದರ ಬಗ್ಗೆಯೂ ತಾವು ತಮ್ಮ ಉತ್ತರದಲ್ಲಿ ಏನನ್ನೂ ಹೇಳಲಿಲ್ಲ. ತಾವು ರಾಜಕೀಯವಾಗಿ ಮಾತನಾಡಿ ತಮ್ಮ ಸಹೋದ್ಯೋಗಿ ಗಳನ್ನು ಬಲವಾಗಿ ಸಮರ್ಥನೆ ಮಾಡಿಕೊಂಡಿದ್ದೀರಿ. ನಾವು ಸ್ಪಷ್ಟವಾಗಿ ಹೇಳುತ್ತೇವೆ, ಒಬ್ಬ ಮಂತ್ರಿಯ ಸಹೋದರ ಕೊಲೆ ಮಾಡಿದ್ದರೆ ಸಂಬಂಧಪಟ್ಟ ಮಂತ್ರಿ ತನ್ನ ಪದವಿಗೆ ರಾಜೀನಾಮೆ ಕೊಡಬೇಕಾಗಿಲ್ಲ. ಇದರ ಬಗ್ಗೆ ತಾವು ನಡೆದ ಸಂಗತಿಗಳ ಬಗ್ಗೆ ಏನು ಸಂಶಯ ಇದೆ ಅದನ್ನು ನಿವಾರಣೆ ಮಾಡುವುದಕ್ಕೆ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ಇನ್‌ವೆಸ್ಟಿಗೇಷನ್ ಮಾಡಿದ್ದರೆ ಅದರ ಫಲ ಏನು ಬಂದಿದೆ, ಇದನ್ನೇನೂ ತಾವು ಹೇಳಲಿಲ್ಲ. ಒಂದೇ ಒಂದು ಮಾತನ್ನು ಮಾತ್ರ ಹೇಳಿದ್ದೀರಿ, ಅದೇನೆಂದರೆ ಅವರು ತಮ್ಮ ಹತ್ತಿರ ಬರಲಿಲ್ಲ ಯಾವುದಕ್ಕೂ ಬರಲಿಲ್ಲ ಎಂದು. ಅವರು ಅಧಿಕಾರಿಗಳ ಮೇಲೆ ತಮ್ಮ ವರ್ಚಸ್ಸನ್ನು ಬೀರಿದ್ದಾರೆ ಇಲ್ಲವೇ ಎನ್ನುವ ಸಂಗತಿ ನಡೆದಿದ್ದರೆ ಅದನ್ನು ವಿಚಾರಣೆ ಮಾಡಿದ ಹೊರತು ನಾವು ಯಾವ ಒಂದು ನಿರ್ಣಯಕ್ಕೆ ಬರುವ ಹಾಗಿಲ್ಲ. ಈ ಡಿಮ್ಯಾಂಡ್ ಬಗ್ಗೆಯೂ ತಾವು ಉತ್ತರ ಕೊಡಲಿಲ್ಲ. ಈ ಬಗ್ಗೆಯೂ ತಾವು ವಿವರವಾಗಿ ಹೇಳಬೇಕು.

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ಶ್ರೀಮಾನ್ ದೇವೇಗೌಡರು ಹೇಳಿದ ಮಾತಿಗೆ ನಾನು ಆಗಲೇ ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಅವರು ನಿರೀಕ್ಷಣೆ ಮಾಡಿದ ರೀತಿ ಯಲ್ಲಿ ನಾನು ಉತ್ತರ ಕೊಟ್ಟಿರಲಿಕ್ಕಿಲ್ಲ. ಮುಖ್ಯವಾಗಿ ಅವರು ಯಾವ ವಿಷಯವನ್ನು ಕೇಳಿದ್ದಾರೆ ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. ಅವರು ಚರ್ಚೆ ಮಾಡದೆ ಇರುವ ವಿಷಯದ ಬಗ್ಗೆ ನಾನು ಹೇಳುವುದಾದರೂ ಹೇಗೆ ? ತಾವುಗಳು ಪತ್ರಿಕಾ ವರದಿಯನ್ನು ಆಧರಿಸಿ ನಡೆದಂಥ ಸಂಗತಿಗಳನ್ನು ನಮ್ಮ ಮುಂದೆ ಇಟ್ಟಿದ್ದೀರಿ. ನಾನೂ ಸಹ ಏನು ಏನು ನಡೆದಿದೆ ಆ ಎಲ್ಲಾ ವಿಚಾರವನ್ನು ವಿವರವಾಗಿ ಹೇಳಿದ್ದೇನೆ. ಪತ್ರಿಕೆಗಳಲ್ಲಿ ಅವರು ವಾಣಿ ಬಸ್‌ನಲ್ಲಿ ಬಂದರು ಎಂದು ಇದೆ, ಆದರೆ ಪೋಲೀಸ್ ರಿಪೋರ್ಟ್ ಪ್ರಕಾರ ಆ ರೀತಿಯಲ್ಲಿಲ್ಲ. ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ಅದು ನಮ್ಮ ಮುಂದೆ ಇರತಕ್ಕ ವರದಿಯಲ್ಲಿಲ್ಲ. ವರದಿಯಲ್ಲಿ ಇಲ್ಲವೇ ಇರುವುದನ್ನು ನಾನು ಹೇಗೆ ಹೇಳಲಿ ?

ಅಧ್ಯಕ್ಷರು.—ಎನ್‌ಕ್ವಯರಿ ಮಾಡಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಆರ್. ಗುಂಡೂರಾವ್.—ವಿಷಯವೇ ಇಲ್ಲದಿರುವಾಗ ಯಾವ ಎನ್‌ಕ್ವಯರಿಯನ್ನು ಮಾಡಿಸಲಿ ? ಸರಿಯಾದ ವಿಷಯ ಇದ್ದರೆ ತಾನೇ ನಾವು ಎನ್‌ಕ್ವೈಯಿರಿ ಮಾಡಿಸುವುದು ? ಮಾನ್ಯ ಬೊಮ್ಮಾಯಿಯವರು ನನಗೆ ಅವರು ತಮ್ಮ ವರ್ಚಸ್ ಬೀರದಿದ್ದರೆ ಅಧಿಕಾರಿಗಳ ಮೇಲೆ ಬೀರಬಹುದು ಎಂದು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಶ್ರೀಮಾನ್ ಇಬ್ರಾಹಿಂ ಅವರು ನನ್ನ ಹತ್ತಿರವಾಗಲೀ, ಮತ್ತೇ ಬೇರೆ ಮಂತ್ರಿಗಳ ಹತ್ತಿರವಾಗಲೀ ಅಥವಾ ಇನ್ನಾವ ಅಧಿಕಾರಿಗಳ ಹತ್ತಿರ ವಾಗಲೀ ವಿಚಾರಣೆ ಮಾಡುವಂಥ ಸಂದರ್ಭದಲ್ಲಿ ಅವರು ಹಸ್ತಕ್ಷೇಪವನ್ನುಮಾಡಿಲ್ಲ ಎನ್ನುವ ಮಾತನ್ನು ನಾನು ಗೃಹ ಖಾತೆಯ ಮಂತ್ರಿಯಾಗಿ ತಮ್ಮ ಮುಂದೆ ಹೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ತಮ್ಮ ಶಕ್ತಿ ಪ್ರಯೋಗ ಮಾಡಿ ತಮ್ಮ ಸಹೋದ್ಯೋಗಿಯನ್ನು ರಕ್ಷಣೆ ಮಾಡುತ್ತಿದ್ದಾರೆ. ಐಜಿಪಿ ಯವರು ತಾವು ಫೋನ್ ಮಾಡಿರುವುದನ್ನು ಡಿನೈ ಮಾಡಿಲ್ಲ. ಇವರು ಸಬ್ ಇನ್ಸ್‌ಪೆಕ್ಟಾರ್‌ನ್ನು ಹೊಡೆದು ಪೋಲೀಸ್ ಠಾಣೆಯನ್ನು ಅತಿಕ್ರಮವಾಗಿ ಪ್ರವೇಶ ಮಾಡಿದಾಗ ಕೇಸುಗಳನ್ನು ಮುಂದ ವರಿಸುವುದು ಬೇಡ ಎಂದು ಹೇಳುವಂಥ ಔಚಿತ್ಯ ಐಜಿಪಿ ಯವರಿಗೆ ಏನು ಇತ್ತು ? ಒಬ್ಬ ಸರ್ಕಾರಿ ನೌಕರರನ್ನು ಹೊಡೆಯುತಕ್ಕಂಥ ಪ್ರವೃತ್ತಿಯನ್ನು ಇಟ್ಟುಕೊಂಡಿರತಕ್ಕವರ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇಡ ಎಂದು ಬೆಂಗಳೂರಿನಿಂದ ದೂರವಾಣಿ ಮುಖೇನ ಹೇಳುವುದನ್ನು ಹೇಗೆ ವಿಚಾರಣೆ ಮಾಡಬೇಕು. ಟ್ರಂಕ್ ಮಾಡಿದ್ದಾರೆಯೋ ಅಥವಾ ವೈರ್‌ಲೆಸ್ ಮೆಸೇಜ್ ಕಳುಹಿಸಿದ್ದಾರೆಯೋ ಅದನ್ನು ನಾವು ವಿಚಾರಣೆ ಮಾಡಿಸಬೇಕು. ಸಬ್ ಇನ್ಸ್‌ಪೆಕ್ಟಾರ್ ವಾಣಿ ಏನು. ಮಾನ್ಯ ಇಬ್ರಾಹಿಂ ಅವರ ವಾಣಿ ಯೇನು. ದೂರವಾಣಿಯ ಹೇಳಿಕೆಯನ್ನು ಯಾವ ರೀತಿ ರೆಕಾರ್ಡ್ ಆಗಿದೆ ? ಸರ್ಕಲ್ ಇನ್ಸ್‌ಪೆಕ್ಟಾರ್ ವಾಣಿಯೇನು ? ಈ ತ್ರಿವೇಣಿ ಸಂಗಮದ ವಿಚಾರಣೆಯಾಗಬೇಕಾಗುತ್ತದೆ. ನಾನು ಇಲ್ಲಿ ಅಪ್ರಕೃತ ಆಪಾದನೆಯನ್ನು ಅವರ ಸಹೋದ್ಯೋಗಿಯ ಮೇಲೆ ಮಾಡಿದ್ದರೆ, ಅವರ ಸಹೋದ್ಯೋಗಿಯ ವರ್ಚಸನ್ನು, ಅವರ ತೇಜಸ್ಸಿಗೆ ಕುಂದು ತರತಕ್ಕಂಥ ರೀತಿಯಲ್ಲಿ ನಾನು ಈ ಸದನದಲ್ಲಿ ನಡೆದುಕೊಂಡಿದ್ದರೆ ನಾನು ಸಾರ್ವಜನಿಕ ಕ್ಷಮೆಯನ್ನು ಕೇಳುತ್ತೇನೆ. ದೇಶದ ಜನತೆಯನ್ನು ನಾನು ಕ್ಷಮೆ ಕೇಳುತ್ತೇನೆ. ಇಂಥ ಸನ್ನಿವೇಶಗಳನ್ನು ಎಂದೂ ನಾನು ಕಲ್ಪಿಸಿಕೊಟ್ಟಿಲ್ಲ,

ಶ್ರೀ ಎಸ್. ಆರ್. ಬೊಮ್ಮಾಯಿ.—ವಿಕ್ಟರ್ ರಿಪೋರ್ಟ್ ಏನು ಇದೆ ಅದನ್ನು ತಾವು ಹೇಳಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ವಿಕ್ಟರ್ ರಿಪೋರ್ಟನ್ನು ಕೊಡದೆ ಇದ್ದರೆ ಮಾನ್ಯ ಸದಸ್ಯರು ಹೇಳುವುದರಲ್ಲಿ ಸ್ವಲ್ಪ ಅರ್ಥವಿದೆಯೆಂದು ನಾವು ಅರ್ಥಮಾಡಿಕೊಳ್ಳುತ್ತೇವೆ. ವಿಕ್ಟರ್ ರಿಪೋರ್ಟ್ ಕೊಡದೇ ಹೋದರೆ ಮಂತ್ರಿಗಳ ಹಸ್ತಕ್ಷೇಪವಿದೆಯೆಂದು ನಾವು ಅರ್ಥಮಾಡಿಕೊಳ್ಳಬಹುದೇ ?

ಶ್ರೀ ಆರ್. ಗುಂಡೂರಾವ್.—ನಾನು ಎಲ್ಲಾ ವಿಷಯಗಳನ್ನು ಕ್ಲಿಯರ್ ಆಗಿ ಹೇಳಿದ್ದೇನೆ. ಟೆಲಿಫೋನ್‌ನ್ನು ಯಾರು ಯಾರಿಗೆ ಮಾಡಿದರು ? ನಾವು ಟೆಲಿಫೋನ್ ಮಾಡದೇ ಇರುವಾಗ ಮಾಡಿದರು ಎಂದು ನಾನು ಹೇಗೆ ಹೇಳಲಿ ?

೪-೦೦ ಪಿ. ಎಂ.

ಐ.ಜಿ.ಪಿ.ಯವರು ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಏತಕ್ಕೆ ಉತ್ತರ ಕೊಡಲಿಲ್ಲಾ ಎಂದರೆ ಅದಕ್ಕೆ ನಾನು ಹೇಗೆ ಉತ್ತರ ಕೊಡುವುದಕ್ಕೆ ಸಾಧ್ಯ. ನಾನು ಈ ಬಗ್ಗೆ ಸ್ಪಷ್ಟವಾಗೀ ಉತ್ತರ ಕೊಡುತ್ತಿದ್ದೇನೆ. It is for the I.G.P., to answer. In what context they had put the question and why he did not reply to that question is not my concern. It is not for me to find out all those things. Let me tell you one more thing. Victor's report or the Dy. S. P.'s Report has not come to me. When the report comes I shall place it before you. But, there is no report at all till now. Why are you worried about these things.

ಶ್ರೀ ಹೆಚ್. ಡಿ. ದೇವೇಗೌಡ.—ಹಾಗಾದರೆ ವಿಕ್ಟರ್ ರಿಪೋರ್ಟ್‌ನ್ನು ತಾವು ಏತಕ್ಕೆ ಸಭೆ ಮುಂದೆ ಇಡಲಿಲ್ಲಾ ? ಮೊದಲೇ ಅವರ ಮೇಲೆ ಬಿಗಿಯಾದ ಕ್ರಮ ತೆಗೆದುಕೊಂಡಿದ್ದರೆ ಕೃಷ್ಣನ ಕೊಲೆ

ಆಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಈ ಕೊಲೆ ಆಗುವುದಕ್ಕೆ ಕಾರಣ ಈ ಸ್ಮಗ್ಲಿಂಗ್ ಆಕ್ಟಿವಿಟೀಸ್ ಏನು ಇತ್ತು ಅದನ್ನು ಹೊರಗಡೆ ಇಟ್ಟಿದ್ದರಿಂದ ಅವಕ್ಕೆ ಕೊಲೆ ಆಯಿತು ಅಲ್ಲವೇ ? ಪೋಲೀಸ್ ಇಲಾಖೆಯ ಬೇಡಿಕೆ ಬಂದಾಗ ಏನೇನು ಎಕ್ಸ್‌ಪ್ರೆಸ್ ರಿಪೋರ್ಟ್ ಇದೆ, ಯಾರ್ಯಾರ ಮೇಲೆ ಛಾರ್ಜ್‌ಷೀಟ್ ಹಾಕಿದ್ದಾರೆ ಅವೆಲ್ಲವನ್ನೂ ಹೇಳುತ್ತೇನೆ. ಈಗ ಅದಕ್ಕೂ ಇದಕ್ಕೂ ಕನೆಕ್ಟ್ ಮಾಡುವುದು ಬೇಡ. ಈಗ ಪೋಲೀಸ್ ಸ್ಟೇಟ್‌ಮೆಂಟ್‌ಅನ್ನು ತಾವು ಓದಿದ್ದೀರಿ. ಅವನು ಹಿಂದೂ ಮಹಾಸಭೆಯವರಿಗೆ ಇನ್‌ಫರ್ಮೇಷನ್ ಕೊಡುತ್ತಾ ಇದ್ದುದರಿಂದ ಅದರಿಂದ ಕೊಲೆ ಆಯಿತು ಅಂತ ಹೇಳಿದ್ದೀರಿ. ಇಟ್ ಈಸ್ ಎ ಪಬ್ಲಿಕ್ ಡಾಕ್ಯುಮೆಂಟ್.

†ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ನಾವೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆಯನ್ನು ಬಹಳ ಮನಸ್ಸಿಟ್ಟು ಕೇಳಿದ್ದೇವೆ. ನಾನು ನಿನ್ನೆ ದಿವಸ ಸಭೆಯಲ್ಲಿರಲಿಲ್ಲ ಅನ್ನುವುದೇನೋ ನಿಜ. ಈ ಸಭೆಯಲ್ಲಿ ಇಲ್ಲದಿದ್ದರೂ ಕೂಡ ಈ ಸಭೆಯಲ್ಲಿ ನಡೆದಂಥಾ ಚರ್ಚೆಯಲ್ಲಿ ಮುಖ್ಯವಾದ ಕೆಲವು ಅಂಶಗಳನ್ನು ನಮ್ಮ ಭಾಗದ ಅನೇಕ ಮಿತ್ರರು ಮಾತನಾಡಿದವರು ಹೇಳಿದಂಥಾ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಮೊಟ್ಟ ಮೊದಲನೆಯದಾಗಿ ಹೇಳಬೇಕಾದರೆ ಮಾನ್ಯ ಮುಖ್ಯ ಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ ನಿಮಗೇನು ಕಷ್ಟ ನಿಮಗೇನು ಕಷ್ಟ ಎಂದು. ಹಾಗಾದರೆ ನಾವು ಏತಕ್ಕೆ ಮಾತನಾಡಬೇಕು ಸುಮ್ಮನೆ ಕೂತುಕೊಳ್ಳುವುದು ಬಿಟ್ಟು. ಅನ್ನುವ ಅರ್ಥವೇ ಅಥವಾ ನಾವು ಇದನ್ನು ಕೇಳುವುದು ತಪ್ಪೋ? ಯಾವುದು ಸರಿ ಅನ್ನುವುದೇ ನನಗೆ ಅರ್ಥವಾಗುತ್ತಾ ಇಲ್ಲ. ನಮಗೇನೂ ಕಷ್ಟ ಇಲ್ಲ. ಇದು ನಮ್ಮ ಕರ್ತವ್ಯ ಅಷ್ಟೆ. ನಮ್ಮ ಕರ್ತವ್ಯ ದೃಷ್ಟಿಯಿಂದ ದೇಶದಲ್ಲಿ ಯಾವುದಾದರೂ ಕೊಲೆಯಾಗಿದ್ದರೆ ಈವೊತ್ತು ನಡೆದಿರುವುದೇ ಅಲ್ಲ ಹಿಂದೆಯೂ ಬೇಕಾದಷ್ಟು ಕೊಲೆ ಆಗಿವೆ, ಮುಂದೆಯೂ ಆಗುತ್ತವೆ ಆದರೆ ಕೊಲೆಗಳು ಆಗುವಾಗ ಈ ರೀತಿಯಾದಂಥಾ ಊಹಾಪೋಹಗಳು ಬರುವುದಿಲ್ಲ. ಹೆಣ್ಣು ಗಂಡು ಬಗ್ಗೆ ಸರಸ ಸಲ್ಲಾಪ ಆಡಿದರೆ ಅಥವಾ ಇನ್ನೇನಾದರೂ ಆದರೆ ಅವೆಲ್ಲಾ ಈ ಪತ್ರಿಕೆಗಳಲ್ಲಿ ಬರುವುದಿಲ್ಲ, ತಮಗೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಜ್ಞಾಪಕಕ್ಕೆ ತಂದುಕೊಡುತ್ತೇನೆ. ಹಿಂದೆ ಒಬ್ಬ ಹೆಣ್ಣು ಮಗಳು ಒಂದು ರಾತ್ರಿ ಮಂತ್ರಿಗಳ ಮನೆಯಲ್ಲಿ ಹೋದದ್ದಕ್ಕೆ ಮಾರನೇ ದಿವಸವೇ ಆ ವಿಚಾರ ದೊಡ್ಡ ಶೀರ್ಷಿಕೆಯಲ್ಲಿ ಪತ್ರಿಕೆಗಳಲ್ಲಿ ಬಂತು. ಮಂತ್ರಿಗಳು ಆ ಹೆಣ್ಣು ಮಗಳನ್ನು ಕರೆದುಕೊಂಡು ಹೋಗಿ ಬಿಟ್ಟರು ಎಂದು.

ಶ್ರೀ ಹೆಚ್. ಡಿ. ದೇವೇಗೌಡ —ಮಂತ್ರಿಗಳು ಕರೆದುಕೊಂಡು ಹೋಗಿ ಆ ಹೆಣ್ಣುಮಗಳನ್ನು ಬಿಡಲಿಲ್ಲಾ. ಮಂತ್ರಿಗಳ ಪ್ರೈವೇಟ್ ಸೆಕ್ರೆಟರಿಯವರು ಅವರನ್ನು ಕರೆದುಕೊಂಡು ಹೋಗಿ ಬಿಟ್ಟರು.

ಶ್ರೀ ಡಿ. ದೇವರಾಜ ಅರಸ್.—ಆ ಹೆಣ್ಣು ಮಗಳು ಮಂತ್ರಿಗಳ ಮನೆಗೆ ಬಂದದ್ದು ಹೇಗೆಂದರೆ ಹಿಂದೆ ಇವರು ಗೋವಾಕ್ಕೆ ಹೋಗಿದ್ದಾಗ ಇವರನ್ನು ಕಂಡು ನಿಮಗೆ ಬೆಂಗಳೂರಿನಲ್ಲಿ ಯಾರಾದರೂ ಪರಿಚಯಸ್ಥರು ಇದ್ದಾರೆಯೋ ನಾನು ಒಂದೆರಡು ದಿವಸ ಬರಬೇಕಾಗಿದೆ ಎಂದು ಕೇಳಿದರಂತೆ. ಅದಕ್ಕಾಗಿ ಅವರು ಎರಡು ದಿವಸ ಬಂದದ್ದು ಉಂಟು ನಂತರ ಹೋದದ್ದೂ ಉಂಟು. ಅವರನ್ನು ಪ್ರೈವೇಟ್ ಸೆಕ್ರೆಟರಿಯವರು ಕರೆದುಕೊಂಡು ಹೋಗಿ ಬಿಟ್ಟದ್ದೂ ಉಂಟು. ಈ ರೀತಿಯಾದ ಒಂದು ಅಪರಾಧ ಒಬ್ಬ ಮಂತ್ರಿಗಳ ಮೇಲೆ ಬಂದಿದ್ದರಿಂದ ಇದರಲ್ಲಿ ಅನುಮಾನ ಕಂಡಿದ್ದರಿಂದ ನಾನು ಎಸ್. ಪಿ. ಡಿವೈಎಸ್‌ಪಿ ಅವರನ್ನು ಕರೆದು ಈ ವರ್ತಮಾನ ನಿಜವೋ ಅಲ್ಲವೋ ಅನ್ನುವುದನ್ನು ತಿಳಿಯಲು ಅವರಿಗೆ ಹೇಳಿದೆ. ಈ ವಿಷಯ ಪೇಪರ್‌ನಲ್ಲೂ ಬಂತು. ನಂತರ ಆ ಹೆಣ್ಣು ಮಗಳು ಎಲ್ಲಿಗೆ ಹೋದಳೋ ಏನೋ ಗೊತ್ತಾಗಲಿಲ್ಲಾ. ಅದನ್ನು ಯಾರೂ ಸಹ ಹೇಳುವುದಕ್ಕಾಗಲಿಲ್ಲಾ. ಆದರೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಹಿಂದಿನದನ್ನೆಲ್ಲಾ ತಿಳಿದುಕೊಂಡು ನಮಗೇನಾಗಬೇಕಾಗಿದೆ, ನಾವು ಯಾರು, ಹಿಂದೆ ಅವರ ಕಾಲದಲ್ಲಿ ಆದದ್ದನ್ನೆಲ್ಲಾ ನಾವೇಕೆ ತೆಗೆದುಕೊಳ್ಳಬೇಕು ಅವರ ಮಾಡಿದ್ದನ್ನು ನಾವೇಕೆ ಪಾಲಿಸಬೇಕು ಅನ್ನುವ ಹಾಗಿದ್ದರೆ ಅದನ್ನು ನಾವೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ನಾವು ಈ ಬಗ್ಗೆ ಜನತೆಯ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಡುವುದನ್ನು ಅವರು ಅಡ್ಡಿಪಡಿಸುವುದಕ್ಕೆ ಸಾಧ್ಯವಿಲ್ಲಾ. ಪ್ರಜಾಸತ್ತೆಯಲ್ಲಿ ನಾವು ಇರುವುದರಿಂದ ಈ ಬಗ್ಗೆ ಕೆಲಸ ಮಾಡಲು ಮಂತ್ರಿಗಳಿಗೆ ಆ ಕೆಲವು ನಾರ್ಮ್ಸ್‌ಗಳು ಇವೆ, ಕೆಲವು ಅರ್ಹತೆಗಳು ಇವೆ. ಮಂತ್ರಿಗಳ ನಡವಳಿಕೆ ಹೇಗೆ ಇರಬೇಕು ಅನ್ನುವುದೂ ಇದೆ. ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಹಸ್ತಕ್ಷೇಪ ಮಾಡಿದ್ದಾರೆಂದು ನನಗೆ ತಿಳಿದಹಾಗೆ ಯಾರೂ ಹೇಳಲಿಲ್ಲಾ. ಇದರಲ್ಲಿ ಮಾನ್ಯ ಮಂತ್ರಿಗಳ ಹಸ್ತಕ್ಷೇಪ ಆಗಿದೆ ಅಂತ ಹೇಳಿದ್ದಾರೇ ವಿನಾ ಮುಖ್ಯಮಂತ್ರಿಗಳ ಹಸ್ತಕ್ಷೇಪ

ಆಗಿದೆ ಅಂತ ಯಾರೂ ಹೇಳಿಲ್ಲಾ. ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಿರತಕ್ಕಂಥಾ ಉತ್ತರ ಅದು ಸರಿಯಾದಂಥಾ ಉತ್ತರವಲ್ಲ. ಮಾನ್ಯ ದೇವೇಗೌಡರು ಹೇಳಿದ ಹಾಗೆ ಇದರಲ್ಲಿ ೨-೩ ಮುಖ್ಯವಾದ ವಿಚಾರಗಳು ಇವೆ. ಅದು ಮಾತ್ರ ಹೇಳುತ್ತೇನೆ, ಅದಕ್ಕೆ ಉತ್ತರ ಕೊಡಲಿ. ಮೊದಲನೆಯದಾಗಿ ಏನೆಂದರೆ ಪತ್ರಿಕೆಗಳಲ್ಲಿ ಈ ಒಂದು ವರದಿ ಬಂದಿದೆ ಅದು ಸರಿಯೋ ತಪ್ಪೋ ?

ಅಧ್ಯಕ್ಷರು.—ತಾವು ಭಾಷಣ ಮಾಡುತ್ತಿದ್ದೀರಾ ಅಥವಾ ಸ್ಪಷ್ಟೀಕರಣ ಕೇಳುತ್ತಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಕೆಲವು ಸಂಶಯಗಳು ಏನು ಇವೆ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿಲ್ಲಾ. ಆ ಎರಡು ಮೂರು ವಿಚಾರಗಳನ್ನು ಮಾತ್ರ ತಮ್ಮ ಮುಂದೆ ಇಡುತ್ತೇನೆ. ಮೊದಲನೆಯದಾಗಿ ನಾನು ಕೇಳುವುದೇನೆಂದರೆ ಕೊಲೆ ನಡೆದ ಕೂಡಲೇ ಭದ್ರಾವತಿ ಪೋಲೀಸ್ ಸ್ಟೇಷನ್‌ನಲ್ಲಿ ಇದ್ದ ಸಬ್‌ಇನ್ಸ್‌ಪೆಕ್ಟರ್ ರಜಾ ತೆಗೆದುಕೊಂಡದ್ದು ಉಂಟೇ ಅಲ್ಲವೇ? ಎರಡನೆಯದಾಗಿ ಅವರು ರಜಾ ತೆಗೆದುಕೊಂಡ ಮೇಲೆ ಇನ್‌ವೆಸ್ಟಿಗೇಷನ್ ನಡೆಸುವುದಕ್ಕೆ ಪ್ರಾರಂಭ ಮಾಡಿದವರು ಸಬ್ ಇನ್ಸ್‌ಪೆಕ್ಟರೇ ಅಥವಾ ಸರ್ಕಲ್ ಇನ್‌ಸ್ಪೆಕ್ಟರೇ? ವಾಣಿ ಅನ್ನುವವರು ಸರ್ಕಲ್ ಇನ್‌ಸ್ಪೆಕ್ಟರೇ ಅಥವಾ ಸಬ್ ಇನ್‌ಸ್ಪೆಕ್ಟರೇ? According to what we hear, Sri Vani is not a Sub-Inspector, he is a Circle Inspector. The question of taking up the investigaton by the Sub-Inspector does not appear anywhere in his report also. I do not know why we have conveniently forgotten the Sub-Inspector here. Normally Sir, what is the practice? ಸ್ವಾಭಾವಿಕವಾಗಿ ಕಾನೂನು ರೀತ್ಯಾ ಅಲ್ಲಿ ಸಬ್ ಇನ್‌ಸ್ಪೆಕ್ಟರ್ ಯಾರಾದರೂ ಇದ್ದಿದ್ದರೆ ಆತ ಇದರ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತಾನೆ. ಇಲ್ಲಿ ನೋಡಿದರೆ ವಾಣಿ ಅನ್ನುವವರು ಸಬ್ ಇನ್‌ಸ್ಪೆಕ್ಟರ್ ಇನ್‌ವೆಸ್ಟಿಗೇಷನ್ ಮಾಡಿದ್ದಾರೆ.

SRI R. GUNDU RAO.—I have made that point very clear. When a case of missing or something is there, it will be registered by the Station House Officer i.e., the Sub Inspector. And when after investis gation the S.I. comes to know that a person is murdered or dead, it will become a murder case. That is why I have said in my statement that the section of the case was altered. As soon as a murder case is registered, the Sub-Inspector cannot investigate. That, I hav- made very clear.

SRI D. DEVARAJ URS.— Then, I think, I must go back to the entire rules and regulations of the Government in so far as the conduct of the S I, CIP and the provisions of the Cr. P C. are concerned. I would like to know from the Government that when there is a murder case, is it the practice that the sub Inspector is not the person to investigate?

SRI R. GUNDU RAO.—Cent per cent. The Sub-Inspeceor cannot investigate. If you are not aware of this fact, I am sorry for that.

SRI D DEVARAJ URS.—That is not correct. The Sub-Inspector has taken leave. He was not in the station. That is why the Circle Inspector has taken up investigation. The Sub-Inspector is a close friend of Sri Khader and his brothers When he came to know that there was a murder case, immediately he took leave.

SRI R. GUNDU RAO.—When there is a murder case, the Sub-Inspector ceases to function as an Investigation Officer. He may function as a Sub Inspector. Investigation Officer should be Circle Inspector.

SRI D. DEVARAJ URS.—Whether the S. I has gone on leave or not is in the report.

SRI R. GUNDU RAO.—It is not correct.

ಶ್ರೀ ಎಚ್. ಡಿ ದೇವೇಗೌಡ.—ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಕಾಲದಲ್ಲಿ ತಮ್ಮ ಇಲಾಖಾ ಅಧಿಕಾರಿಗಳಿಂದ ಮತ್ತೊಮ್ಮೆ ತಿಳಿದುಕೊಂಡು ಹೇಳಲಿ. ಇಲ್ಲಿ ಮೊದಲು ಮಿಸ್ಸಿಂಗ್ ಕಂಪ್ಲೈಟ್ ದಾಖಲಾದ ಮೇಲೆ ಅದನ್ನು ತನಿಖೆ ಮಾಡುವುದು ಸಬ್‌ಇನ್ಸ್‌ಪೆಕ್ಟರ್ ಕಕ್ಷೆಯಲ್ಲಿ ಬರುತ್ತದೆ. ಇಲ್ಲಿ ಯಾರ ಯಾರ ಅಧಿಕಾರ ವ್ಯಾಪ್ತಿ ಎಷ್ಟೆಷ್ಟು ಇರುತ್ತದೆಂಬ ಬಗ್ಗೆ ನಾನು ಹೇಳಲು ಹೋಗುವುದಿಲ್ಲ. ಆದರೆ ಇಲ್ಲಿ ಸಬ್-ಇನ್ಸ್‌ಪೆಕ್ಟರ್ ಆದವರು ತಮ್ಮ ಒಂದು ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುಕಾಗಿ ರಜಾ ಹಾಕಿದ್ದು ನಿಜ. ಆದ ಕಾರಣ ಮಾನ್ಯ ಮುಖ್ಯ ಮಂತ್ರಿಗಳು ಇನ್ನೊಂದು ಸಲ ವಿಚಾರ ಮಾಡಿ ನೋಡಲಿ. ಅವರು ರಜಾ ಹಾಕಿದ ಮೇಲೆ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಇನ್‌ವೆಸ್ಟಿಗೇಷನ್ ಮಾಡಿರುವುದು.

ಶ್ರೀ ಆರ್. ಗುಂಡೂರಾವ್.—ವಿರೋಧ ಪಕ್ಷದ ನಾಯಕರಿಗೆ ಮತ್ತೊಮ್ಮೆ ಹೇಳುತ್ತೇನೆ, ಅವರು ರಜಾ ಹೋಗಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಇಲ್ಲವೆಂದು ತಾವು ಹೇಳುತ್ತೀರಿ, ಆದರೆ ಪತ್ರಿಕಾ ವರದಿಯ ಪ್ರಕಾರ ಅವರು ರಜಾದ ಮೇಲೆ ಹೋಗಿದ್ದಾರೆ. ಆದರೂ ತಾವು ಇಲ್ಲವೆಂದು ಹೇಳುತ್ತಿದ್ದೀರಿ ಈಗ ಅದನ್ನು ಸಾಬೀತು ಮಾಡಿ ತೋರಿಸುವ ಕೆಲಸ ನಮಗೆ ಸೇರಿದ್ದು. ಈ ಬಗ್ಗೆ ಲೋಕಲ್ ಆಗಿ ಏನೇನು ನಡೆದಿದೆ ಎಂಬುದನ್ನು ತಿಳಿದುಕೊಳ್ಳಲು ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ರಜಾ ಹೋಗಿದ್ದರೆ ರೆಕಾರ್ಡ್ ಇರುತ್ತದೆ.

ಶ್ರೀ ಡಿ. ದೇವರಾಜ ಅರಸ್.—ರಜಾ ತೆಗೆದುಕೊಳ್ಳದೆ ಊರು ಬಿಟ್ಟು ಹೋಗಿರಬಹುದು, ಆಮೇಲೆ ರೆಕಾರ್ಡ್ ತಿದ್ದಿಕೊಳ್ಳಬಹುದೆಂದು ಏನು ಬೇಕಾದರೂ ಮಾಡಿರಬಹುದು ; ಇಲ್ಲಿ ಅತಿ ಮುಖ್ಯವಾದ ಮತ್ತೊಂದು ವಿಚಾರವೆಂದರೆ, ಈ ದೇಶದಲ್ಲಿ ಎಷ್ಟೆಷ್ಟೋ ಕೊಲೆಗಳಾಗುತ್ತವೆ ಈ ಎಲ್ಲಾ ಕೊಲೆಗಳ ವಿಚಾರದಲ್ಲಿಯೂ ಯಾರ ಯಾರ ಮೇಲೋ ಅನುಮಾನ ಪಟ್ಟುಕೊಂಡು ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಸರಿಯೂ ಅಲ್ಲ. ಆದರೆ ಇಲ್ಲಿ ಸಂದರ್ಭ ಯಾವ ರೀತಿ ಇದೆ ಎಂಬುದು ಮುಖ್ಯ. ಈ ಕೊಲೆ ಪ್ರಕರಣ ಅನುಮಾನಾಸ್ಪದವಾದ ರೀತಿಯಲ್ಲಿ ಇಲ್ಲದಿದ್ದರೆ ನಾವು ನೆನ್ನೆಯಿಂದ ಇಲ್ಲಿ ಚರ್ಚೆ ಮಾಡಿ ಇದಕ್ಕಾಗಿ ಕಾಲವನ್ನು ವಿನಿಯೋಗ ಮಾಡುವ ಅಗತ್ಯವಿರಲಿಲ್ಲ. ಮತ್ತು ಇಷ್ಟೊಂದು ದೊಡ್ಡದಾಗಿ ಚರ್ಚೆ ಮಾಡುವ ಅಗತ್ಯವೂ ಇರಲಿಲ್ಲ. ನಾವು ವಿರೋಧ ಪಕ್ಷದಲ್ಲಿರುವ ಕಾರಣ ಸರ್ಕಾರದ ಮೇಲೆ ಆಪಾದನೆ ಮಾಡಬೇಕು ಇಲ್ಲವೇ ಸರ್ಕಾರದಲ್ಲಿರುವ ತಪ್ಪನ್ನು ಕಂಡುಹಿಡಿಯ ಬೇಕೆಂದುಕೊಂಡು ನಾವು ಚರ್ಚೆ ಮಾಡುತ್ತಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಆಗಲೀ ಅಥವಾ ಅವರ ಮಂತ್ರಿ ಮಂಡಲದವರಾಗಲೀ ತಿಳಿದುಕೊಂಡಿದ್ದರೆ, ಅವರ ಒಂದು ತಿಳಿವಳಿಕೆ ಸತ್ಯಕ್ಕೆ ದೂರವಾಗಿರುತ್ತದೆಂದು ಹೇಳಬೇಕಾಗುತ್ತದೆ. ಇಲ್ಲಿ ನಮ್ಮ ಒಂದು ಜವಾಬ್ದಾರಿಯೂ ಇದೆ. ಇಲ್ಲಿನ ಸನ್ನಿವೇಶ ಯಾವ ರೀತಿ ಇದೆ. ಇದಕ್ಕೂ ಮೊದಲು ಏನೇನು ನಡೆದಿದೆ ಎಂಬುದನ್ನೆಲ್ಲಾ ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇವರು ಎಂ. ಎಲ್. ಎ. ಆಗಿದ್ದಾಗ ಏನೇನು ಮಾಡಿದ್ದರು ಎಂಬುದನ್ನು ನೋಡಬೇಕಾಗುತ್ತದೆ. ಒಬ್ಬ ಮನುಷ್ಯನ ಗುಣಾವಗುಣಗಳನ್ನು ತಿಳಿಯಬೇಕಾದರೆ ಆ ಮನುಷ್ಯನ ಹಿಂದಿನ ಚರಿತ್ರೆಯನ್ನು ಸಹ ನೋಡಬೇಕಾಗುತ್ತದೆ. ಮಂತ್ರಿಯಾದ ಕೂಡಲೇ will there be a transformation or metamorphasis in his character simply because a man becomes a Minister or an M. L. A. ? ಈ ಬಗ್ಗೆ ನಾನು ಯಾವ ಥಿಯರಿಯನ್ನೂ ಓದಿದ್ದು ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನಾದರು ಶಾಸ್ತ್ರ, ಪುರಾಣ ಓದಿ ತಿಳಿದುಕೊಂಡಿದ್ದರೆ, ಹೇಳಲಿ; ನಾನು ಸಹ ತಿಳಿದುಕೊಳ್ಳುತ್ತೇನೆ. ಇಲ್ಲಿ ಯಾರು ಅಕ್ಯೂಸ್ಡ್ ಇದ್ದಾರೆ, ಅವರ ಮೇಲೆ ಅನೇಕ ಕೇಸ್‌ಗಳಿವೆ. ಸುಮಾರು ೧೧ ಕೇಸುಗಳಿವೆ. ಅದರಲ್ಲಿ ಮುಖ್ಯವಾದದ್ದು

ತಾ। ೧೯-೭-೧೯೭೮ರಲ್ಲಿ, ಈಗ ಮಂತ್ರಿಗಳಾಗಿರುವ ಶ್ರೀಮಾನ್ ಇಬ್ರಾಹಿಂ ಅವರ ಮೇಲೆ about whom so much is being talked now, the report says that the M. L. A telephoned and took strong objection for the action taken against his brothers. This is from the police records. It is directly against the present Minister Mr. Ibrahim, who was then an M. L. A. and had interfered on behalf of his brothers who were taken to police station in a certain case. Likewise there are so many instances. ಇನ್ನು ಮೂರನೇ ವಿಚಾರ ಎಂದರೆ ಈ ಕೊಲೆಯ ವಿಚಾರ ಪೋಲೀಸಿನವರಿಗೆ ೧೫ನೇ ತಾರೀಖು ಗೊತ್ತಾಯಿತು. ಅವರೇ ಹೇಳುವ ಹಾಗೆ ಅವರಿಗೆ ೧೫ನೇ ತಾರೀಖಿಗೆ ರಿಪೋರ್ಟ್ ಆಯಿತು ಈ ಕೊಲೆ ನಡೆದದ್ದು ೨೬-೩-೧೯೮೦ ರಲ್ಲಿ. ೨೬-೩-೧೯೮೦ ರಿಂದ ೧೫-೪-೮೦ರ ವರೆಗೆ ಪೋಲೀಸರಿಗೆ ಈ ಬಗ್ಗೆ ಯಾರೂ ಹೇಳಲಿಲ್ಲ ಎಂದು ಇದರ ಅರ್ಥ ; ಈ ಕೊಲೆ ಬಗ್ಗೆ ಯಾರು ಸಾಕ್ಷಿ ಹೇಳಿದ್ದಾರೆ ಲಾರೆನ್ಸ್ ಎನ್ನುವರು. ಅವರು ಬೆಂಗಳೂರಿಗೆ ಬಂದು ಸೇರಿಬಿಟ್ಟಿದ್ದರು. ಅವರು ಏತಕ್ಕೆ ಬೆಂಗಳೂರಿಗೆ ಬಂದು ಸೇರಿದರು ? ಅದನ್ನೇ ಈಗ ಭದ್ರಾವತಿಯ ಜನರು ಹೇಳುತ್ತಾ ಇರೋದು. ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ ಏನ್ರೀ ಬೆಳಿಗ್ಗೆ ಎದ್ರೆ ಬೇಕಾದಷ್ಟು ಕೊಲೆ ಆಗುತ್ತವೆ, ಮದ್ದೂರಿನಲ್ಲಿ ಆಗುತ್ತವೆ, ಮಂಡ್ಯದಲ್ಲಿ ಆಗುತ್ತವೆ, ನಮ್ಮ ಊರಿನಲ್ಲಿ ಆಗುತ್ತವೆ, ನಿಮ್ಮ ಊರಿನಲ್ಲಿ ಆಗುತ್ತವೆ, ಇದಕ್ಕೆ ಏನು ಮಹಾ ಬೆಲೆ' ಇದೆ ಎಂದು ಹೇಳುತ್ತಾರೆ.

ಶ್ರೀ ಆರ್. ಗುಂಡೂರಾವ್. ನಾನು ಹಾಗೆ ಹೇಳಿಲ್ಲ. ಕೊಲೆಗಳು ಸಾಮಾನ್ಯವಾಗಿ ಆಗುತ್ತಾ ಇರುತ್ತವೆ ಎಂದು ಹೇಳಿದ್ದೇನೆ. ಅದಕ್ಕೆ ಏನು ಮಹಾ ಬೆಲೆ ಇದೆ ಅಂತ ನಾನು ಹೇಳಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಹೀಗಿದ್ದ ಮೇಲೆ ನನ್ನ ಮಾತನ್ನು ನೀವು ಸ್ಪಷ್ಟವಾಗಿ ಕೇಳುತ್ತೀರಿ ಅಂತ ಆಯಿತು. ಏತಕ್ಕೆ ಎಂದರೆ ಅವರು ಕೊಲೆಯ ಬಗ್ಗೆ ಮುಂದಿನ ಕೆಲಸವನ್ನು ಯಾವ ರೀತಿ ಯಾದರೂ ಮಾಡಲಿ ; ಆದರೆ ಒಂದು ಮಾತ್ರ ಸಾಬೀತು ಆಯಿತು, ಭದ್ರಾವತಿಯಲ್ಲಿ ಜನರು ಈ ಕೊಲೆಯ ಬಗ್ಗೆ ಏನು ಹೇಳುತ್ತಿದ್ದಾರೆ ಅದನ್ನು ಇವರು ಸ್ಪಷ್ಟವಾಗಿ ಒಪ್ಪಿದ್ದಾರೆ ಎಂದಾಯಿತು.

ಶ್ರೀ ಆರ್. ಗುಂಡೂ ರಾವ್.—ಇಲ್ಲ ಮದ್ದೂರು ; ಮಂಡ್ಯದಲ್ಲಿ ಕೊಲೆಗಳು ಆಗುತ್ತಾ ಇರುತ್ತವೆ, ಅದಕ್ಕೆ ಏನು ಮಹಾ ಬೆಲೆ ಇದೆ ಅಂತ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ ಅಂತ ನೀವು ಹೇಳಿದಿರಲ್ಲ, ಅದಕ್ಕೆ ನಾನು ಆ ತರಹ ಇಲ್ಲ ಅಂತ ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಇದಕ್ಕೂ ಇಲ್ಲವೋ ?

ಶ್ರೀ ಆರ್. ಗುಂಡೂರಾವ್.—ಇಲ್ಲ.

ಶ್ರೀ ಡಿ ದೇವರಾಜ ಅರಸ್.—ಇದಕ್ಕೂ ಇಲ್ಲವೋ ; ಅದಕ್ಕೇ ನಿಮ್ಮ ಧೋರಣೆ ಎಂತಹದ್ದು ಎಂದು ಹೇಳಿದೆ. Either of the thing must be true. If he does not care for it he does not care for all these things. If he really cares he has to take note of the feelings of the people of Bhadravathi.

SRI R. GUNDU RAO.—I am taking note of it.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ೨೬-೩ ೮೦ ರಂದು ನಡೆದಂಥ ಕೊಲೆಯ ಬಗ್ಗೆ ೧೫ನೇ ತಾರೀಖಿನ ಏಪ್ರಿಲ್‌ವರೆಗೆ ನಮಗೆ ಗೊತ್ತಾಗಲಿಲ್ಲ ಎಂದು ಅವರು ಹೇಳಬೇಕಾದರೆ ಅಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿರತಕ್ಕಂಥಾವರು ಇದರ ಬಗ್ಗೆ ವಿಚಾರಣೆ ನಡೆಸುವುದಕ್ಕೆ ಮನಸ್ಸು ಮಾಡಲಿಲ್ಲ ಎಂದು ಗೊತ್ತಾಗುತ್ತದೆ. ಕೊಲೆಯ ಆಪಾದಿತ ಮಾನ್ಯ ಮಂತ್ರಿಯವರ ತಮ್ಮ ; ಅವರು ಇವರು ಬಹಳ ಸ್ನೇಹಿತರು, ಹಿಂದಿನಿಂದ ಬಂದಿರತಕ್ಕಂಥ ಪರಸ್ಪರ ಸ್ನೇಹ ಸಂಬಂಧ -ಇವೆಲ್ಲಾ ಕಾರಣಗಳಿಂದ ಅವರು ಸುಮ್ಮನೆ ಕುಳಿತಿದ್ದರು. ಅವರವರ ಸ್ನೇಹ ಸಂಬಂಧದ ಬಗ್ಗೆ ನಮಗೆ ಪೋಲೀಸ್ ರಿಕಾರ್ಡ್‌ಗಳಿಂದ ಗೊತ್ತಾಗುತ್ತದೆ. ಈ ಕೊಲೆಯ ಬಗ್ಗೆ ಸಾಕ್ಷಿಯಾಗಿರತಕ್ಕಂಥ ಲಾರೆನ್ಸ್ ತನ್ನ ಜೀವಕ್ಕೆ ಎಲ್ಲಿ ಅಪಾಯ ಒದಗುತ್ತದೆಯೋ ಎಂಬ ಹೆದರಿಕೆಯಿಂದ ಬೆಂಗಳೂರಿಗೆ ಬಂದುಬಿಟ್ಟಿದ್ದ. ಆಮೇಲೆ ಇವರು ಈ ಕೇಸನ್ನು ಸಿ. ಓ. ಡಿ ಗೆ ನೇಮಿಸಿದರು. ಈ ಕೇಸನ್ನು ಸಿ. ಓ. ಡಿ ಗೆ ನೇಮಿಸುವುದಕ್ಕೆ ಕಾರಣ ಏನು ? ನಾನೂ

ಕೊಡ ಹಿಂದೆ ಹೋಮ್ ಮಿನಿಸ್ಟರ್ ಆಗಿ ಕೆಲಸ ಮಾಡಿದ್ದೇನೆ. ನನಗೆ ಗೊತ್ತಿರುವಂತೆ ಈ ಕೇಸನ್ನು ಯಾವ ಸಂದರ್ಭದಲ್ಲಿ ಸಿ. ಓ. ಡಿ ಗೆ ನೇಮಿಸಬೇಕು ಎಂದರೆ ಅಲ್ಲಿಯ ಜನರೇ ಆಗಲೀ, ಇವಕ್ಕೆ ಸಂಬಂಧ ಪಟ್ಟ ಪಾರ್ಟಿಗಳವರೇ ಆಗಲಿ ಅವರಿಗೆ ಅನುಮಾನ ಬಂದು ಈ ಸ್ಥಳದ ಪೋಲೀಸರಿಂದ ನಮಗೆ ನ್ಯಾಯ ಸಿಕ್ಕುವುದಿಲ್ಲ ಎಂಬ ಅನುಮಾನ ಇದೆ, ಆದ್ದರಿಂದ ಈ ಕೇಸನ್ನು ಇಂಪಾರ್ಷಿಯಲ್ ಆಗಿ ನೋಡುವವರಿಗೆ ನೇಮಿಸಿ ಎಂದು ಹೇಳಿದಾಗ ಇದನ್ನು ಸಿ. ಓ. ಡಿ ಗೆ ರೆಫರ್ ಮಾಡುವುದು ಇದೆ. ಈ ಕೇಸನ್ನು ಸಿ.ಓ.ಡಿ ಗೆ ರೆಫರ್ ಮಾಡಿರುವುದರಲ್ಲಿ ಅವರೇ ಆರ್ಡರ್ ಮಾಡಿದರೂ ಅಥವಾ ಐ.ಜಿ.ಪಿಯವರು ಆರ್ಡರ್ ಮಾಡಿದರೆ ಗೊತ್ತಿಲ್ಲ ಸಬ್‌ಇನ್ಸ್‌ಪೆಕ್ಟರ್ ಇದ್ದರು, ಸರ್ಕಲ್ ಇನ್ಸ್‌ಪೆಕ್ಟರ್ ಇದ್ದರು, ಇವರನ್ನು ಬಿಟ್ಟು ಇವನ್ನು ಸಿ. ಓ. ಡಿಗೆ ರೆಫರ್ ಮಾಡಬೇಕಾದರೆ ಇದಕ್ಕೆ ಪ್ರಬಲವಾದ ಕಾರಣವಿರಬೇಕು. ಭದ್ರಾವತಿಯಲ್ಲಿ ಸಾಮಾನ್ಯ ಜನರ ಮನಸ್ಸಿನಲ್ಲಿ ಅಥವಾ ಯಾವ ವ್ಯಕ್ತಿ ಕೊಲೆ ಆದನೋ ಅವನಿಗೆ ಸಂಬಂಧಪಟ್ಟಂಥ ಜನರ ಮನಸ್ಸಿನಲ್ಲಿ 'ಇವರು ಈ ಕೊಲೆಯ ಬಗ್ಗೆ ತೇಪೆ ಸಾರಿಸಿ ಬಿಡುತ್ತಿದ್ದಾರೆ, ಈ ಕೊಲೆ ಕೇಸನ್ನು ಮುಚ್ಚಿ ಬಿಡುತ್ತಿದ್ದಾರೆ. ಎಂದು ಇದ್ದಂತಹ ಪ್ರಬಲವಾದ ಅನುಮಾನವನ್ನು, ಶಂಕೆಯನ್ನು, ಭೀತಿಯನ್ನು ತಿಳಿದುಕೊಂಡಮೇಲೆ, ಜನರ ಸಂಶಯ ಪತ್ರಿಕೆಗಳಲ್ಲಿ ಬಂದದ್ದನ್ನು ನೋಡಿದ ಮೇಲೆ ಇವರು ಎಚ್ಚೆತ್ತು ಕೊಂಡು ಇದನ್ನು ಸಿ ಓ ಡಿ ಗೆ ಕೊಟ್ಟಿದ್ದಾರೆ. ಹೀಗಿದ್ದ ಮೇಲೆ ಇದಕ್ಕೆ ಹಿನ್ನೆಲೆ ಏನೋ ಇರಬೇಕು ಎಂದಾಯಿತು ಇದರಲ್ಲಿ ಲಾರೆನ್ಸ್‌ನನ್ನು ಬೆಂಗಳೂರಿನಿಂದ ಕರೆಸಿಕೊಂಡು ವಿಚಾರಣೆ ಮಾಡಿದ್ದಾರೆ ಮತ್ತು ಈ ಸಂಬಂಧದಲ್ಲಿ ಅವರಿಂದ ಒಂದು ರಿಪೋರ್ಟನ್ನು ತರಿಸಿಕೊಂಡಿದ್ದಾರೆ ಅವರ ಹೆಂಡತಿ ಅಲ್ಲಿಗೆ ರಿಪೋರ್ಟ್ ಮಾಡುವುದಕ್ಕೆ ಹೋದ ಮೇಲೆ ಅವಳನ್ನು ಹೆದರಿಸಿ ಕಳಿಸಿಬಿಟ್ಟಿದ್ದಾರೆ The lady has gone to make a report and she has been threatened. ಇದೆಲ್ಲಾ ಆಯಿತು. ಇದಾದ ಮೇಲೆ ಮಾರ್ಚಿ ೩೦ನೇ ತಾರೀಖಿನ ದಿವಸ ಮಾನ್ಯ ಮಂತ್ರಿಯವರು ಭದ್ರಾವತಿಗೆ ಹೋದರು. ಇವರೆಲ್ಲಾ ನನ್ನ ತಮ್ಮಂದಿರು ಅಲ್ಲವೇ ಅಲ್ಲ, ಇವರು ಬಹಳ ತಪ್ಪು ಕೆಲಸ ಮಾಡುತ್ತಿದ್ದಾರೆ. I disown them. ಎಂದು ಹೇಳಿದ್ದಾರೆ. ಈ ಕೊಲೆ ನಡೆದಿರುವುದು ೨೬-೩-೮೦ ರಂದು. ಮಾನ್ಯ ಮಂತ್ರಿಯವರು ಭದ್ರಾವತಿಗೆ ಹೋಗಿ ಮೀಟಿಂಗ್ ನಡೆಸಿರತಕ್ಕಂಥಾದ್ದು ೩೦ನೇ ತಾರೀಖು, ಅಲ್ಲಿ ಮಾನ್ಯ ಮಂತ್ರಿಯವರು ಹೇಳುತ್ತಿದ್ದರು, ಅದು ಯಾವ ಕಾನ್‌ಟೆಕ್ಸ್ಟ್ ? ಇದಕ್ಕೆ ಏನು ಕಾರಣ ? ಎಂದು ಹೇಳುತ್ತಿದ್ದರು. Suddenly he did not realise that they are his brothers. He knew that he was his brother. He know he had made several Interferance on their behalf because they are on police records and he says he wants to disown. ಅಲ್ಲಿ ಹೋಗಿ ಅವರು ಏನು ಹೇಳುತ್ತಿದ್ದಾರೆ ಎಂದರೆ ಇವರಿಗೂ ನಮಗೂ ಸಂಬಂಧ ಇಲ್ಲ ಎಂದು. That is not the proper way. ಇವರನ್ನೆಲ್ಲಾ ದುಬಾಯಿಗೆ ಕಳುಸುತ್ತಿದ್ದೇನೆ ಎಂಬುದಾಗಿ ಮಾನ್ಯ ಮಂತ್ರಿಯವರು ಹೇಳಿದರು ಎಂದು ಪತ್ರಿಕೆಯಲ್ಲಿ ಇದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಖಾದರ್ ಬಸ್‌ನಲ್ಲಿ ಬರಲಿಲ್ಲ. ಜೀಪ್‌ನಲ್ಲಿ ಬರಲಿಲ್ಲ. ನಡೆದುಕೊಂಡು ಬಂದರು ಎಂದು ಅವರು ಹೇಳಿದ್ದಾರೆ. ಖಾದರ್‌ನನ್ನು ವಾಣಿ ಬಸ್‌ನಲ್ಲಿ ಅಲ್ಲಿಗೆ ಕರೆದು ಕೊಂಡು ಬಂದು ಬಿಟ್ಟರು ಎಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ಇಲ್ಲಪ್ಪ, ನಮ್ಮ ಹತ್ತಿರ ಆ ಬಗ್ಗೆ ವರದಿ ಇಲ್ಲ. ಎಂದು ಅವರು ಹೇಳಬಹುದು. ಅವರ ಹತ್ತಿರ ವರದಿ ಇಲ್ಲದಿದ್ದರೆ ಅದೆಲ್ಲಾ ಸುಳ್ಳೆ ? ವರದಿ ಇಲ್ಲದೇ ಇರಬಹುದು, ನಿಮಗೆ ಗೊತ್ತಿಲ್ಲದೇ ಇರಬಹುದು. I agree as a Home Minister you have to rely on whatever report the officers and the Secretariat give you through the I.G.P. But supposing we say that there are instances where even your I.G.P. may not know, the local people many or may not have just kept quiet Any way it is a fact that Khadar was in Bangalore. When he surrendered he went from here-Bangalore, and surrendered. That fact cannot be disputed Where was he all this time ? ಅವನು ಸರೆಂಡರ್ ಆದದ್ದು ಯಾವ ತಾರೀಖಿನಲ್ಲಿ ? ಅವನು ಸರ್‌ಂಡರ್ ಆದದ್ದು ೨೭-೫-೮೦ ರಲ್ಲಿ ೨೬-೩-೮೦ ರಲ್ಲಿ ಈ ಕೊಲೆ ಆಯಿತು ಖಾದರ್ ೨೭-೫-೮೦ರಲ್ಲಿ ಸರೆಂಡರ್ ಆದ. ಈ ಮಧ್ಯದಲ್ಲಿ ಲಾರೆನ್ಸ್‌ನ ಸ್ಟೇಟ್ ಮೆಂಟ್ ಬಂತು. ಮತ್ತು ಅನ್ವರ್ ಹಾಗೂ ಬಾಬು ಅವರು ಅರೆಸ್ಟ್ ಆದರು. ಈ ಟೈಮ್‌ನಲ್ಲಿ ಇವರು ಹೋಗಿ 'ನಾನು ಸರ್‌ಂಡರ್ ಆಗದ್ದೇನೆ.' ಎಂದು ಆಗಿದ್ದಾರೆ. ಅಲ್ಲಿಯವರೆಗೆ ಇವರು ಎಲ್ಲಿದ್ದರು ಸ್ವಾಮಿ?

ಕುವಾಯತ್‌ಗೆ ಹೋಗಿ ಹಿಂದಕ್ಕೆ ಬಂದರೇ? ಬಾಬಾಬುಡನ್‌ಗಿರಿಗೆ ಹೋಗಿದ್ದರೆ? ಬೆಂಗಳೂರಿನಲ್ಲಿ ಲೆಜಿಸ್ಲೇಚರ್ಸ್ ಹೋಮ್‌ನಲ್ಲಿ ಇದ್ದರೇ? ಕಾರಿನಲ್ಲಿ ತಿರುಗುತ್ತಾ ಇದ್ದರೇ? ಅಣ್ಣನ ಮನೆಗೆ ಹೋಗಿದ್ದರೇ? ಇವರು ಎಲ್ಲಿಗೆ ಹೋಗಿದ್ದರು? This is very relevant and very important for this case. ಪತ್ರಿಕೆಗಳು ಏನು ವರದಿ ಮಾಡಿವೆ ಎಂದರೆ ಇವರು ಇಲ್ಲಿ ಕಾರುಗಳಲ್ಲಿ ಓಡಾಡುತ್ತಿದ್ದರು, ಅನೇಕ ಜನರು ಇವರು ಓಡಾಡುತ್ತಿದ್ದುದನ್ನು ನೋಡಿದ್ದಾರೆ ಇವರು ಬೆಂಗಳೂರಿನಲ್ಲೇ ಇದ್ದರು, ಇಂತಿಂತಹ ಕಾರ್‌ಗಳಲ್ಲಿ ಓಡಾಡಿದ್ದಾರೆ ಎಂದು ವರದಿ ಮಾಡಿವೆ. ಹೀಗೆಲ್ಲಾ ಇರಬೇಕಾದರೆ ನಾನು ಇದನ್ನೆಲ್ಲಾ ತಮ್ಮ ಮುಂದೆ ಹೇಳುತ್ತಾ ಇರತಕ್ಕಂಥದಲ್ಲ. ಇದು ಸಾಧಾರಣ ಕೊಲೆ, ಯಾರೋ ಬಂದರು, ಜಗಳ ಆಯಿತು ಹೀಗಾಯಿತು, ಎಂದು ಹೇಳತಕ್ಕಂಥಾದ್ದು ಇದು ಬೇರೆ ವಿಚಾರ ಆದರೆ ಈ ಕೊಲೆಯಲ್ಲಿ ಮಹತ್ತರವಾದ ವಿಚಾರ ಇದ್ದೇ ಇದೆ ಅವರು ಮಂತ್ರಿಗಳಾದ ತಕ್ಷಣ ಅವರ ತಮ್ಮ ಕೊಲೆ ಮಾಡಿದರೆ ಮಂತ್ರಿಗಳ ತಲೆ ತೆಗೆಯಿರಿ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಒಂದು ಸಂಸಾರದಲ್ಲಿ ಯಾರೋ ಒಬ್ಬರು ತಪ್ಪು ಮಾಡಿದರು ಎಂದರೆ ಆ ಸಂಸಾರದಲ್ಲಿರತಕ್ಕಂಥ ಬೇರೆಯವರನ್ನು ಶಿಕ್ಷೆ ಮಾಡಿರಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ ಆದರೆ ಇಂತಹ ಸಂದರ್ಭದಲ್ಲಿ ಅವರು ಬಹಿರಂಗವಾಗಿ ಅರಿರತಕ್ಕಂಥ ಮಾತು, ಅವರ ತಮ್ಮನಾದವನು ಯಾರು ಆಕ್ಯೂಸ್ಡ್ ಇದ್ದಾನೆ ಅವನು ಇಲ್ಲಿ ಬಂದು ಇದ್ದಂತಾದ್ದು, ಪೋಲೀಸರು ಏಪ್ರಿಲ್ ೧೫ನೇ ತಾರೀಖಿನವರೆಗೆ ಸುಮ್ಮನೆ ಗಂಭೀರವಾಗಿ ಇದ್ದಂತಾದ್ದು-ಇವೆಲ್ಲವನ್ನೂ ಒಟ್ಟಾಗಿ ತೆಗೆದುಕೊಂಡರೆ ಏನು ಒಂದು ಚಿತ್ರ ನಮ್ಮ ಕಣ್ಣ ಮುಂದೆ ಕಾಣುತ್ತವೆ. ಎನ್ನುವುದು ಇದರಲ್ಲಿ ಬಹಳ ಮುಖ್ಯ. ಈ ಚಿತ್ರ ಏನು ಕಾಣುತ್ತಿದೆ ಅದಕ್ಕೆ ಒಂದು ಕ್ವೆಶ್ಚನ್ ಮಾರ್ಕ್ ಇದೆ. ಶ್ರೀಮಾನ್ ಇಬ್ರಾಹಿಂರವರು ಮಾನ್ಯ ಮಂತ್ರಿಗಳಾದ್ದರಿಂದ, ಅವರ ತಮ್ಮ ಒಂದೆ ಅನೇಕ ಪೋಲೀಸ್ ಕೇಸ್‌ಗಳಲ್ಲಿ ಇನ್‌ವಾಲ್ವ್ ಆಗಿ ಹಸ್ತಕ್ಷೇಪ ಮಾಡಿರುವುದರಿಂದ, ಅವನ ಮೇಲೆ ಅನುಮಾನ ಬಂದದ್ದರಿಂದ ಅವನು ಪೂರ್ಣ ಪರೀಕ್ಷೆಗೆ ಒಳಪಟ್ಟು ಪೂರ್ಣ ಮಾಹಿತಿ ಈ ದೇಶಕ್ಕೆ ಮತ್ತು ಜನರಿಗೆ ಗೊತ್ತಾಗುವವರೆಗೆ ಮಾನ್ಯ ಮಂತ್ರಿಗಳ ಮೇಲೆ ಇರತಕ್ಕಂಥ ಒಂದು ರೀತಿಯಾದ 'ಕ್ಲೌಡ್' ಅಂತ ನಾವು ಏನು ಹೇಳುತ್ತೇವೆ ಅದು ಇದ್ದೇ ಇರುತ್ತದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಎಷ್ಟೇ ಜೋರಾಗಿ ಅವರ ಟೇಬಲ್ ತಟ್ಟಿ 'ಇಲ್ಲ' ಮಾನ್ಯ ಮಂತ್ರಿಯವರದು ಏನೂ ತಪ್ಪಿಲ್ಲ, ಅವರು ನಿರಪರಾಧಿ ಇದ್ದಾರೆ, ನಾನು ಅವರನ್ನು ಮಂತ್ರಿಸ್ಥಾನದಿಂದ ತೆಗೆಯಬೇಕಾದ್ದು ಇಲ್ಲ. ಅವರು ರಾಜೀನಾಮೆಯನ್ನು ಕೊಡ ಬೇಕಾದ್ದು ಇಲ್ಲ ಎಂದು ಹೇಳಬಹುದು. He may assert with all the emphasis at his command. But I would like to submit, Sir, that the House or the people of the State can nevr believe or th suspicion that has been built up as a result of several of these omisions and commissions can never be washed off.

೪-೩೦ ಪಿ, ಎಂ.

ಷೇಕ್ಸ್‌ಪಿಯರ್ ಒಂದು ಕಡೆ, "The perfume of whole of persia cannot wash away the smell" ಎಂದು ಹೇಳಿದ್ದಾನೆ. ಹಾಗೆ ತಾವು ವಾಷ್ ಮಾಡುವುದರಿಂದ ಅನುಮಾನ ಎಂದೂ ಹೋಗುವುದಿಲ್ಲ. ಅವರನ್ನು ಇಟ್ಟುಕೊಳ್ಳಬೇಕು ಎಂದರೆ ಇಟ್ಟುಕೊಳ್ಳಿ. ಅವರನ್ನು ಡಿಸ್‌ಮಿಸ್ ಮಾಡುವುದಕ್ಕೂ ನಮಗೆ ಅಧಿಕಾರ ಇಲ್ಲ. ಅಪಾಯಿಂಟ್‌ಮೆಂಟ್ ಮಾಡುವುದಕ್ಕೂ ನಮಗೇನೂ ಅಧಿಕಾರವಿಲ್ಲ. ನಾವು ಹೇಳಿದರೆ ನಿಮಗೇನು ಕಷ್ಟ ಅಂದರೆ, ನಾವು ಹೇಳುವುದನ್ನು ಹೇಳುತ್ತಿದ್ದೇವೆ. ನಮ್ಮ ಕಷ್ಟ ಏನೆಂದರೆ, ಜನಗಳಿಗೋಸ್ಕರವಾಗಿ ಹೇಳುತ್ತಿದ್ದೇವೆ. ಒಂದು ರೀತಿಯಲ್ಲಿ ಯಾರೋ ಒಬ್ಬರು ಅಧಿಕಾರಕ್ಕೆ ಬಂದ ಕೂಡಲೇ ತಮ್ಮ ಸಂಸಾರದವರು ಅಥವಾ ತಮ್ಮ ಬಂಧುಗಳು ಬೇರೆಯವರ ಮೇಲೆ ಅತ್ಯಾಚಾರ ಮಾಡಿದರೆ, ಇಂತಹ ಕೊಲೆಗಳನ್ನು ಮಾಡಿದರೆ, ಇನ್ನಾವುದಾದರೂ ದುರ್ನಡತೆಗಳನ್ನು ಮಾಡಿದರೆ ಅದಕ್ಕೆ ಯಾರೂ ಎದುರೇ ಇಲ್ಲ ಪೋಲೀಸರೂ ಏನು ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂಥ ವಾತಾವರಣ ದೇಶದಲ್ಲಿ ಕಲ್ಪನೆಯಾದರೆ ನನಗೇಕೆ ಇಲ್ಲಿರಬೇಕು. ನಮಗೇನು ಕಷ್ಟ ಅಂದರೆ ಏನರ್ಥ ? ರಾಜೀನಾಮೆ ಕೊಟ್ಟು ಹೋಗಿ, ಅವರಿಗೆ ಪಾಪ ಗುರುಗಳಿಂದ ಬಂದಿರುವ ವಿದ್ಯೆ. ದೇಶದಲ್ಲಿ ಯುದ್ಧ ಆಗಿಬಿಟ್ಟಿದೆ, ಚುನಾವಣೆಯಲ್ಲಿ ಯುದ್ಧ ಆಗಿಬಿಟ್ಟಿದೆ ನಿಮ್ಮನ್ನೆಲ್ಲಾ ಮುಗಿಸಿದ್ದೇವೆ ಎಂದು ಅವರು ಹೇಳಿದರು. ಅವರು ಮುಗಿಸಿದ್ದಲ್ಲ, ಅದು ಹೇಗೆ ಆಯಿತು ಎನ್ನುವುದು

ಅವರಿಗೂ ಗೊತ್ತಿದೆ, ನನಗೂ ಗೊತ್ತಿದೆ. ಈಗ ಚುನಾವಣೆಯಲ್ಲಿ ಮುಗಿಸಿಬಿಟ್ಟಿದ್ದಾರೆ. ಅವರಿಗೂ ಈಗಲೂ ಒಂದು ಮನಸ್ಸು ಇದೆ. ಏನೆಂದರೆ, ಈ ದೇಶದಲ್ಲಿ ವಿರೋಧಪಕ್ಷಗಳು ಇರಲೆ ಬಾರದು ಎಂದು ತೀರ್ಮಾನ ಮಾಡಿದ್ದಾರೆ. ಪ್ರತಿ ಪ್ರಯತ್ನವೂ ಅದಕ್ಕೋಸ್ಕರ ನಡೆಯುತ್ತಾ ಇದೆ. ಅದಕ್ಕೆ ಬೇಕಾದರೆ ಉದಾಹರಣೆ ಕೊಡುತ್ತೇನೆ, ಅವರು ರಾಜಕೀಯ ಭಾಷಣ ಮಾಡುತ್ತಿದ್ದಾರೆ. ಯಜ್ಞ ಮಾಡಿದಿರಿ, ತಿಥಿ ಮಾಡಿದಿರಿ, ನಾವೂ ಮಾಡಿ ಮತ್ತೆ ಏಳಿಯುತ್ತೇವೆ ಅದು ಮುಂದಿನ ಮಾತು, ಈಗ ಬೇಡ. ಆದರೆ ಯಜ್ಞದಲ್ಲಿ ಏನೇನು ಮಾಡಿದ್ದೀರಿ ಎನ್ನುವುದು ನನಗೆ ಗೊತ್ತಿದೆ. ದುರ್ನೀತಿಗಳನ್ನು ಉಪಯೋಗ ಮಾಡಿ ಗೆದ್ದಿದ್ದೀರಿ, ನನಗೆ ಗೊತ್ತಿದೆ. ಆದುದರಿಂದ ಯಜ್ಞದ ವಿಚಾರ ಈಗ ಬೇಡ. ಇವರು ೧೯೮೦ನೇ ಇಸವಿಯಿಂದ ಜೆಗೆ ಹೇಳುತ್ತಿದ್ದಾರೆ, ಇಲ್ಲಿಂದ ಆ ಪಾರ್ಟಿಗೆ ಹೋದರು ಎಂದು ನಾನು ಹೇಳುತ್ತೇನೆ, ಈ ದೇಶದಲ್ಲಿ ೬ ತಿಂಗಳಲ್ಲಿ ನಡೆದಿರತಕ್ಕ ಡಿಫೆಕ್ಷನ್ ಇಡೀ ನಮ್ಮ ಇಂಡಿಯಾ ದೇಶದ ಹಿಸ್ಟರಿ ಆಫ್ ಡೆಮಾಕ್ರಸಿಯಲ್ಲೇ ನಡೆದಿಲ್ಲ. Over 500 defections have taken place within a period of 4 months. ಏನೆಂದರೆ, ಸರ್ಕಾರಗಳು, ಸರ್ಕಾರಗಳೇ ಚಲೋಜಾವ್. ಗೋವಾದಲ್ಲಿ ನಮ್ಮ ಕಾಂಗ್ರೆಸ್ ಚರಕಾ ಚಿನ್ಹೆಯಿಂದ ಗೆದ್ದಂಥ ಸರ್ಕಾರ ಹೊರಟುಹೋಯಿತು. ಹರಿಯಾಣಾದಲ್ಲಿ ಜನತಾ ಪಕ್ಷದ ಸರ್ಕಾರ, ಜನತಾ ಪಕ್ಷದಿಂದ ಗೆದ್ದು ಬಂದವರನ್ನು ಕರೆದುಕೊಂಡುಬಂದು ತೊಡೆಮೇಲೆ ಕೂರಿಸಿಕೊಂಡು ರಾಜ್ಯಭಾರ ನಡೆಸುತ್ತಾ ಇದ್ದೀರಿ, ನೀವು ಯಜ್ಞದ ಬಗ್ಗೆ ಹೇಳುತ್ತಿದ್ದೀರಿ, ನಾನು ಹೇಳುವುದಕ್ಕೆ ಬುದ್ದಿಲ್ಲ.

ಶ್ರೀ ಆರ್. ಗುಂಡೂರಾವ್.—ಅದಕ್ಕೆಲ್ಲಾ ನಾನು ಉತ್ತರ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳಿದ್ದು ರೈಟ್. You have lost the right. Don't talk. It is a fact.

SRI R. GUNDU RAO.—I will tell you the fact.

SRI D. DEVARAJ URS.—You may tell 100 facts.

SRI R. GUNDU RAO.—You are the leader of the defectors.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಗುಂಡೂರಾಯರೆ, ದೇಶದಲ್ಲಿ ಪತ್ರಿಕೆಗಳಲ್ಲಿ ಎಡಿಟೋರಿಯಲ್ ಬರೆದಿದ್ದು ನನ್ನ ಮೇಲೆ ಅಲ್ಲ, ನಿಮ್ಮ ಮೇಲೆ.

ಶ್ರೀ ಆರ್. ಗುಂಡೂರಾವ್. ಮಾನ್ಯ ಅಧ್ಯಕ್ಷರೇ, ನಾನು ರಾಜಕೀಯ ಮಾತನಾಡಬೇಕು ಎಂದು ಇರಲಿಲ್ಲ, ಅವರು ಮಾತನಾಡಿದ್ದರಿಂದ ಹೇಳುತ್ತೇನೆ - ಗುರುಗಳು ಹೇಳಿದ ಬುದ್ಧಿಯನ್ನು ಹೇಳುತ್ತಿದ್ದಾರೆ. ಇವರು ೧೨ ವರ್ಷ ಗುರುಗಳ ಜೊತೆಯಲ್ಲಿದ್ದವರು ಕೊನೆಗೆ ಅವರಿಗೆ ಕೈಕೊಟ್ಟು ಹೋಗಿದ್ದಾರೆ. ಈಗ ನೀತಿ ಹೇಳುತ್ತಿದ್ದಾರೆ. ಸಮಯ, ಸಂದರ್ಭ, ಅನುಕೂಲಕ್ಕೆ ಗುರು. ಶ್ರೀ ಬಾಬು ಜಗಜೀವನರಾಂ ಅವರು ಯಾವ ಪಾರ್ಟಿಯಿಂದ ಗೆದ್ದವರು, ಕಾಂಗ್ರೆಸ್-ಐ ನಿಂದ ಗೆದ್ದು ಇವತ್ತು ಕಾಂಗ್ರೆಸ್ ಯು ಎಂದು ಹೇಳುತ್ತಿದ್ದಾರೆ. He is the champion of defectors in this country. Therefore, the Leader of the Opposition should resign because he has elected from Congress (I) ticket. If he is really popular he must contest the election from Congress (U) ticket and then acquire the right to talk in this House.

ಶ್ರೀ ಡಿ. ದೇವರಾಜ ಅರಸ್.—ಎಂಥಾ ಅಸ್ತ್ರ ಪ್ರಯೋಗ ಮಾಡಿದ್ದಾರೆ ಅಂದರೆ, ಆ ಅಸ್ತ್ರಕ್ಕೆ ನನ್ನ ಹತ್ತಿರ ಬೇರೆ ಅಸ್ತ್ರ ಇಲ್ಲ ಎಂದು ತಿಳಿದುಕೊಂಡು ಬೆದರಿಕೆ ಹಾಕಿದ್ದಾರೆ. ಇದಕ್ಕೆ ಒಂದು ಮಾತು ಕೇಳುತ್ತೇನೆ, ಉತ್ತರ ಕೊಡಲಿ ಆ ಮನುಷ್ಯ.

ಅಧ್ಯಕ್ಷರು.—ಸಬ್ಜೆಕ್ಟ್ ಬಿಟ್ಟು ಹೋಗುತ್ತಿದ್ದೀರಿ, ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಹೇಳಿ.

SRI D. DEVARAJ URS.—When the Chief Minister has said something I would also like to say something.

ಅಧ್ಯಕ್ಷರು.—ನೀವು ಸಬ್ಜೆಕ್ಟ್ ಬಿಟ್ಟು ಹೋಗುತ್ತಿದ್ದೀರಿ, ಸಮಯ ಹೋಗುತ್ತಿದೆ,

ಶ್ರೀ ಡಿ. ದೇವರಾಜ ಅರಸ್.—ವಿಷಯ ಅಂಥಾದ್ದು. ಸಬ್ಜೆಕ್ಟ್ ಇಲ್ಲ, ಪ್ರಿಡಿಕೇಟ್ ಬಿಟ್ಟು ಹೋಗಿದೆ.

ಅಧ್ಯಕ್ಷರು.—ನಾನು ಹೇಳಬೇಡಿ ಎಂದು ಹೇಳುತ್ತಾ ಇಲ್ಲ. I have just pointed out to you my views.

SRI D. DEVARAJ URS.—Sir, I yielded when the Hon'ble Chief Minister wanted to say something. Now I want to reply. ನಾನು ಡಿಫೆಕ್ಟರ್ಸ್‌ನಲ್ಲಿ ಅಗ್ರಗಣ್ಯ ಒಪ್ಪಿಕೊಳ್ಳೋಣ. ಇವರು ಬಹಳ ಯುದ್ಧ ಮಾಡಿ ಗೆದ್ದಿದ್ದಾರೆ. ತಮಿಳು ನಾಡಿನಲ್ಲಿ ಸೋತಿದ್ದಾರೆ. ೮ ರಾಜ್ಯಗಳಲ್ಲಿ ಗೆದ್ದಿದ್ದಾರೆ, ೯ನೇ ರಾಜ್ಯದಲ್ಲಿ ಸೋತಿದ್ದಾರೆ, ನಿಮ್ಮ ತತ್ವವನ್ನೇ ಒಪ್ಪಿಕೊಳ್ಳೋಣ. ನಿಮ್ಮ ತತ್ವದ ಪ್ರಕಾರ, ತಮಿಳುನಾಡಿನಲ್ಲಿ ಸೋತಿದ್ದಾರಲ್ಲ. ಅಲ್ಲಿನ ಎಂ. ಪಿ. ಗಳಿಗೆಲ್ಲಾ ಹೇಳಿ, ರಾಜಿನಾಮೆ ಕೊಡಿಸುತ್ತಾರಾ ಕೇಳಿ. ತಮಿಳುನಾಡಿನಲ್ಲಿ ಭರ್ಜರಿಯಾಗಿ ಸೋತಿದ್ದೀರಿ. ಆದ್ದರಿಂದ ನಿಮ್ಮ ಎಂ. ಪಿ ಗಳು ಕೆಲವರು ಇದ್ದಾರಲ್ಲಾ ಅವರಿಂದ ಏಕೆ ರಾಜಿನಾಮೆ ಕೊಡಿಸಬಾರದು ? ಇರಲಿ, ಡಿಫೆಕ್ಟರ್ಸ್ ಯಾರು, ಯಾರು ಮಾಡಿಸುತ್ತಾರೆ, ಹೇಗೆ ಆಗಿದೆ ಎನ್ನುವುದು ದೇಶಕ್ಕೆ ಗೊತ್ತಿದೆ. ಆದುದರಿಂದ ಅದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ರಾಜ್ಯ ರಾಜ್ಯಗಳೇ, ಸರ್ಕಾರ ಸರ್ಕಾರಗಳೇ ಡಿಫೆಕ್ಷನ್ ಮಾಡಿಕೊಂಡು ನನ್ನನ್ನು ಡಿಫೆಕ್ಟರ್ ಎಂದು ಹೇಳುತ್ತಿದ್ದಾರೆ, ಪಾಪ. ಅವರು ಹೇಳುವುದಕ್ಕೂ ಅಭ್ಯಂತರವಿಲ್ಲ, ನಾನು ಹೇಳುವುದಕ್ಕೂ ನನಗೆ ಅಭ್ಯಂತರವಿಲ್ಲ. ಈ ಇಬ್ಬರನ್ನೂ ಜಡ್ಜ್ ಮಾಡುವುದಕ್ಕೆ ಜನಗಳಿಗೆ ಅಭ್ಯಂತರವಿಲ್ಲ. ಈ ಒಂದು ಸಂಶಯಾತ್ಮಕ ವಾತಾವರಣದಲ್ಲಿ ತಾವು ನಿಮ್ಮ ಮಂತ್ರಿಗಳನ್ನು ಇಟ್ಟುಕೊಳ್ಳತಕ್ಕಂಥಾದ್ದು ಸರ್ವಥಾ ನೀತಿಯಲ್ಲ. ನೀವು ಅದಕ್ಕೆ ಬೇರೆ ಕಾನೂನು ಏನೂ ಮಾಡಿಲ್ಲ. ಅವರ ಮೇಲೆ ಏನೂ ಆಪಾದನೆ ಇಲ್ಲ. ಆದ್ದರಿಂದ ಇಟ್ಟುಕೊಳ್ಳುತ್ತೇನೆ ಅಂಥಾ ಹೇಳಿಕೆ ಹೇಳಿಕೊಂಡು ಹೋಗುತ್ತಿದ್ದೀರಿ, ಇದಕ್ಕೇನು ತಡೆ ಇದೆಯೇ ? ಇದು ತಪ್ಪು ಅಥವಾ ಸರಿ ಎಂದು ಹೇಳತಕ್ಕ ಹಕ್ಕು ನಮಗೆ ಇದೆ. ಇಂಥಾ ವಾತಾವರಣದಲ್ಲಿ ಅವರನ್ನು ಮಂತ್ರಿಮಂಡಲದಲ್ಲಿ ಮುಂದುವರಿಸಿಕೊಂಡು ಹೋಗತಕ್ಕಂಥದ್ದು ಸರ್ವಥಾ ಸರಿ ಹೋಗುವುದಿಲ್ಲ. Consti u ionally you may be right, but mor lly and ethic lly you do not stand on any ground. ಅದಕ್ಕೆ ನಾವು ಹೇಳತಕ್ಕಂಥದ್ದು ಇಷ್ಟೇ ಮಾತ್ತು ಶ್ರೀ ದೇವೆ ಗೌಡರವರು ಹೇಳಿದ ಹಾಗೆ ಅವರು ಯಾವ ಒಂದು ಸೂಕ್ಷ್ಮವಾದ ವಿಚಾರಗಳನ್ನು ಎತ್ತಿದ್ದಾರೆ ಅದಕ್ಕೊಂದಕ್ಕೂ ತಾವು ಉತ್ತರ ಕೊಡಲಿಲ್ಲ. ನಮಗೆ ಅದರಿಂದ ಸಮಾಧಾನವಾಗಿಲ್ಲ, ನಾವು ಎಷ್ಟೇ ಏನೇ ಹೇಳಿದರೂ ತಾವು ಒಂದು ತೀರ್ಮಾನಕ್ಕೆ ಬಂದುಬಿಟ್ಟಿದ್ದೀರಿ, under any circum tances the Minister need not give his resignation ; I do not press ಇಂತ ತೀರ್ಮಾನಕ್ಕೆ ಬಂದು ಬಿಟ್ಟಿದ್ದೀರಿ. ಆದುದರಿಂದ ನಮಗೆ ಅದನ್ನು ಪ್ರೊಟೆಸ್ಟ್ ಮಾಡತಕ್ಕಂಥ ಅಧಿಕಾರವಿದೆ, ಇದನ್ನು ಜನತೆಯ ಕೋರ್ಟಿನ ಮುಂದೆ ಕೇಳುವುದಕ್ಕೆ ಅದನ್ನು ನಾವು ಇಲ್ಲಿಯೂ ಹೇಳುತ್ತೇವೆ ಮಾತ್ರ, ಹೊರಗಡೆ ಎಲ್ಲೆಲ್ಲಿ ಹೇಳಬೇಕೊ ಅಲ್ಲೆಲ್ಲಾ ಹೇಳುತ್ತೇವೆ. ಜನ ಯಾವುದೋ ಒಂದು ಕಾಲದಲ್ಲಿ ತೀರ್ಮಾನಕ್ಕೆ ಬರುತ್ತಾರೆ ಅಲ್ಲಿಯವರೆಗೆ ಹೇಳುತ್ತೇವೆ, ತಾವು ತಮ್ಮ ತೀರ್ಮಾನಕ್ಕೆ ಬದ್ಧರಾಗಿದ್ದೀರಿ, ನಾವು ಮಂತ್ರಿಗಳವರು ರಾಜಿನಾಮೇ ಕೊಡುವವರೆಗೆ ಮತ್ತು ನಮಗೆ ಬಂದಿರತಕ್ಕ ಅನುಮಾನವನ್ನು ಪರಿಹಾರ ಮಾಡದೇ ಇರುವುದರಿಂದ ಸರ್ಕಾರದ ಧೋರಣೆ, ನೀತಿ ಏನಿದೆ ಅದನ್ನು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತೇವೆ.

(ವಿರೋಧ ಪಕ್ಷದ ನಾಯಕರೊಡನೇ ಇತರೇ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗವನ್ನು ಮಾಡಿದರು...)

MR. SPEAKER.—I have heard the members and the Chief Minister. I think the matter has been discussed sufficiently in the form of a preliminary submission. There is no need to discuss it further. The alleged interference of a Minister cannot be said to be a fit subject to warrant an adjournment motion. I therefore withhold my consent.